(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭೆಯಿಂದ ಹೊರನಡೆದರು)

ಶ್ರೀ ಬಿ.ಎಸ್. ಯಡಿಯೂರಪ್ಪ :– ಅವರಿಗೆ ಮಾಡಿಸಿಕೊಡುತ್ತೇನೆ ಬನ್ನಿ ಎಂದೆ. ಅವರು ಬೇಜಾರು ಮಾಡಿಕೊಂಡು ಹೋಗಿಬಿಟ್ಟರು

ಉಪಾಧ್ಯಕ್ಷರು :– ಅವರು ಮತ್ತೆ ಬರುತ್ತಾರೆ. ಅವರು ಬಂದಮೇಲೆ ಮತ್ತೆ ಮಾತನಾಡುವಿರಂತೆ. ಈಗ ತೊಂದರೆಯೇನು ಇಲ್ಲ. ಮಾನ್ಯ ಹೆಗ್ಡೆಯವರೆ ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಅವರೇನು ಹಣವನ್ನು ಕೇಳಿದ್ದಾರೆ, ಅದು ಬಂದ ತಕ್ಷಣ ಕೊಟ್ಟು ಅಲ್ಲಿ ಮೋಟಾರ್ ಫಿಕ್ಸ್ ಮಾಡಲು ವ್ಯವಸ್ಥೆ ಮಾಡುತ್ತೇವೆ. ಅವರಿಗೆ ವೆಲ್‌ನಿಂದ ಬನ್ನಿ ಎಂದೆ. ಅದಕ್ಕೇ ಅವರು ಬೇಜಾರು ಮಾಡಿಕೊಂಡು ಹೋದರು.

ಶ್ರೀ ಜೆ.ಎಸ್. ಗಡ್ಡದೇವರ ಮಠ :– ಅವರು ಹೇಳುತ್ತಾರೆಂದಷ್ಟೇ ಅಲ್ಲ, ಎಲ್ಲಾ ತಾಲ್ಲೂಕುಗಳಲ್ಲೂ ಈ ಸಮಸ್ಯೆ ಇದೆ. ನಮ್ಮ ಕ್ಷೇತ್ರದಲ್ಲಿ 300 ಹೆಚ್.ಪಿ. ಮೋಟಾರೊಂದು ಸುಟ್ಟು ಸುಮಾರು ದಿವಸಗಳಿಂದ ದುರಸ್ಥಿಯಾಗಿಲ್ಲ.

ಉಪಾಧ್ಯಕ್ಷರು :– ಬಜೆಟ್ ಮೇಲೆ ಮುಗಿಯಲಿ. ಅನಂತರ ಮಾತನಾಡಿ.

3) 2007–2008ನೇ ಸಾಲಿನ ಆಯವ್ಯಯ ಮೇಲಿನ ಮುಂದುವರೆದ ಚರ್ಚೆ :–

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಮಾನ್ಯ ಹಣಕಾಸು ಸಚಿವರು ಆಯವ್ಯಯವನ್ನು ಮಂಡನೆ ಮಾಡುವಾಗ 3ನೇ ಪೇಜಿನಲ್ಲಿ "ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆನಿಂದ ಹೆಜ್ಜೆಯನರಿಯಬಾರದು" ಎಂದು ಹೇಳಿದ್ದಾರೆ. ಇವರು ಹಿಂದಿನ ಹೆಜ್ಜೆಯನ್ನು ನೋಡದೆಯೇ ಮುಂದಿನ ಹೆಜ್ಜೆಯನ್ನಿಟ್ಟಿದ್ದಾರೆಯೇ ಎಂಬ ಅನುಮಾನ ಶುರುವಾಗುತ್ತದೆ. ಹಿಂದಿನ ಅವಧಿಯಲ್ಲಿ ಏನೇನು ಅಭಿವೃದ್ಧಿಯಾಗಿದೆ, ಅದನ್ನು ನೋಡದೆಯೇ ಕೇವಲ ಈ ಸರ್ಕಾರದ ಅಭಿವೃದ್ಧಿಯೆಂದು ಮಾತ್ರ ಹೇಳಿಕೊಳ್ಳಬಾರದು. 4 ವರ್ಷದಲ್ಲಿ financial discipline ಬಂದಂಥದ್ದು. ಅದರ ಬಗ್ಗೆ ಸ್ವಲ್ಪ ಹೇಳಿದ್ದರೆ ಒತ್ತು ಬರುತ್ತಿತ್ತು. ಇನ್ನೊಂದು ಆಲೋಚನೆ

ಏನೆಂದರೆ, ನಿಮ್ಮ ಮುಂದಿನ ಸಮಸ್ಯೆಯನ್ನು ನೋಡಿಕೊಂಡು ಈಗ ಇದನ್ನೇನಾದರೂ ಹಾಕಿದ್ದೀರ? ಮುಂದಿನ ಸಮಸ್ಯೆಗಳ ಬಗ್ಗೆ ಏನಾದರು ಜಾಸ್ತಿ ಹೇಳಿದ್ದೀರಾ ಎಂಬ ಅನುಮಾನ ಬರುತ್ತಿದೆ. ನಾನು ನಮ್ಮ ಭಾಗದಿಂದ ಶುರು ಮಾಡುತ್ತೇವೆ. ಮೀನುಗಾರಿಕಾ ಇಲಾಖೆಯಲ್ಲಿ ತಾವೇನು ಮತ್ತೆ ಆಶ್ರಯ ಯೋಜನೆಯನ್ನು ಕೈಗೊಂಡಿದ್ದೀರಿ, ಹತ್ತು ಸಾವಿರ ಮನೆಯನ್ನು ಕೊಡುತ್ತೀರಿ, ಹಿಂದೆ ಸಿದ್ಧರಾಮಯ್ಯನವರು ಐದು ಸಾವಿರ ಮನೆಯನ್ನು ಕೊಟ್ಟಿದ್ದರು. ಈಗ ಹತ್ತು ಸಾವಿರ ಮಾಡಿದ್ದಾರೆ. ಮಧ್ಯದಲ್ಲಿ ನಮಗೇನು ಬರಲಿಲ್ಲ. ಮತ್ತೆ ಆಶ್ರಯ ಯೋಜನೆಯಲ್ಲಿ ಒಳ್ಳೆಯ ಕಾರ್ಯಕ್ರಮವನ್ನು ಮಾಡಿ...ಆದರೆ, ಮೀನುಗಾರರ ಮುಖಂಡರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದನ್ನು ತಾವು ನೋಡಿದ್ದೀರೋ ಇಲ್ಲವೋ? Indian express paper ನಲ್ಲಿ ಒಂದು ಹೇಳಿಕೆ ಬಂದಿದೆ. "ಮೀನುಗಾರಿಕಾ ಬಂದರಿನ ಹೂಳೆತ್ತುವ ಕಾರ್ಯಕ್ರಮವಾಗದಿದ್ದರೆ" ನಮ್ಮ ಕಾಲದಲ್ಲಿ ಆರಂಭವಾದ ಜಟ್ಟಿಗಳ ನಿರ್ಮಾಣ ಇನ್ನೂ ಪೂರ್ಣವಾಗದಿದ್ದರೆ ಕೇವಲ ಮನೆಗಳನ್ನು, ಕೆರೋಸಿನ್, ಡೀಸೆಲ್‌ಗೆ subsidy ಕೊಟ್ಟರೆ ಪ್ರಯೋಜನವಾಗುವುದಿಲ್ಲ. ಹಿಂದೆ ಎಸ್.ಎಂ.ಕೃಷ್ಣರವರೇನು ಡೀಸೆಲ್ subsidy 50,000 ಲೀಟರ್‌ವರೆಗೆ ನಿಲ್ಲಿಸಿದ್ದರು ಅದಕ್ಕಿಂತಾ ಜಾಸ್ತಿ ಖರ್ಚಾಗುತ್ತಿಲ್ಲ. ನೀವು ಹೆಚ್ಚು ಹಣವನ್ನು ಹೂಳೆತ್ತಲು ಕೊಡಬೇಕಾಗುತ್ತದೆ. ಪ್ರತಿ ಮಳೆಗಾಲದಲ್ಲಿ ಅಪಘಾತಗಳು ಸಂಭವಿಸುತ್ತದೆ. ಅದರಲ್ಲಿ ಮೀನುಗಾರರು ಸಾಯುವಂಥದ್ದನ್ನು ಕಾಣುತ್ತಿದ್ದೇವೆ. ಅವರು ಸತ್ತಮೇಲೆ ಪರಿಹಾರ ಕೊಟ್ಟರೆ ಪ್ರಯೋಜನವಾಗುವುದಿಲ್ಲ. ಅದರ ಜೊತೆಗೆ ಒಂದು ಬೇಡಿಕೆಯನ್ನಿಡುತ್ತೇನೆ. ಪ್ರತಿಯೊಬ್ಬ ಮೀನುಗಾರನೇನು ಬೋಟ್‌ನಲ್ಲಿ ಹೋಗುತ್ತಾನೆ, ಅವನಿಗೆ group insurance ಕಾರ್ಯಕ್ರಮವನ್ನು ಹಾಕಿ. ಆಗ ಸರ್ಕಾರ ಪರಿಹಾರವನ್ನು ಕೊಡುವುದು ನಿಂತುಹೋಗುತ್ತದೆ. ಒಂದೇ ಬೋಟ್ನಲ್ಲಿ ಒಂದೇ ಕುಟುಂಬದ ಇಬ್ಬರು ಹೋಗಬಾರದು ಎಂಬುದನ್ನು ಕಡ್ಡಾಯವಾಗಿ ಮಾಡಬೇಕು. ಏಕೆಂದರೆ ಯಾವುದಾದರೂ ದುರಂತವಾದಾಗ ಒಂದೇ ಕುಟುಂಬದ ಎರಡು ಮೂರು ಜನರು ಒಂದೇ ಬೋಟ್ನಲ್ಲಿದ್ದಾಗ ಬಹಳ ತೊಂದರೆಯಾಗುತ್ತದೆ. ಒಳನಾಡು ಮೀನುಗಾರಿಕೆಯ ಬಗ್ಗೆ ನೀವು ಏನನ್ನೂ ಹೇಳಿಲ್ಲ. ಕರಾವಳಿ ಮೀನುಗಾರರಿಗಿಂತ ಒಳನಾಡಿನ

ಮೀನುಗಾರರಲ್ಲಿ ಬಹಳ ಬಡವರಿದ್ದಾರೆ. ಅವರ ಅಭಿವೃದ್ಧಿಯ ಬಗ್ಗೆ ನೀವು ಏನೂ ಕಾರ್ಯಕ್ರಮವನ್ನು ಹಮ್ಮಿಕೊಂಡಿಲ್ಲ. ಅದರ ಬಗ್ಗೆ ಸ್ವಲ್ಪ ಗಮನಹರಿಸಬೇಕು ಮತ್ತು ಏನು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರೆಂದು ಹೇಳಬೇಕು. ಮಾನ್ಯ ಕುಮಾರಸ್ವಾಮಿಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಬಜೆಟ್ ಮಂಡನೆಯಾದ ಮೇಲೆ "Anganwadi workers disappointment" ಎಂದು Hindu paper ನಲ್ಲಿ ಬಂದಿದೆ. ಅವರು ಬಜೆಟ್ ಮಂಡನೆ ಮಾಡುವ ಮೊದಲೇ honorarium ಜಾಸ್ತಿ ಮಾಡುತ್ತೇವೆ, ಬೇರೆ ಬೇರೆ ಕಾರ್ಯಕ್ರಮಗಳನ್ನು ಹಾಕಿಕೊಡುತ್ತೇವೆಂದು ಹೇಳಿದ್ದರು. ಆದರೆ, ನೀವು ಹೇಳಿದ್ದು ಒಂದೂ ಆಗಲಿಲ್ಲ. ನಾನು ಮಾತನಾಡುವಾಗ ಮಾನ್ಯ ಪ್ರಕಾಶ್‌ರವರು ಮಧ್ಯದಲ್ಲಿ ಕೇಳಿದರು, ನಾನು 63 ಕೋಟಿ ರೂಪಾಯಿಗಳನ್ನು ಬೇರೆ ಬೇರೆ ಸಂಸ್ಥೆಗಳಿಗೆ ಕೊಟ್ಟಿದ್ದಕ್ಕೆ ವಿರೋಧವೆಂದರೆ, ಯಾರ ಹತ್ತಿರ ಹಣವಿತ್ತು, ಪುನಃ ಅವರಿಗೆ ಹಣವನ್ನು ಕೊಡುವ ಅವಶ್ಯಕತೆ ಇಲ್ಲ. ಅವರು ಒಳ್ಳೆಯ ಕೆಲಸವನ್ನು ಮಾಡಿದ್ದಕ್ಕೆ ಪ್ರಶಸ್ತಿಯನ್ನು ಕೊಡಿ. ಪುನಃ ಹಣವನ್ನು ಕೊಡುವ ಅವಶ್ಯಕತೆ ಇರಲಿಲ್ಲ. ಅಂಗನವಾಡಿಯವರಿಗೆ ಹೆಚ್ಚು ಹಣವನ್ನು ಕೊಡಿ. honorium ಜಾಸ್ತಿ ಮಾಡಿ. ಶಾಲಾ ಕಟ್ಟಡಗಳಿಗೆ ಹೆಚ್ಚು ಹಣವನ್ನು ಕೊಡಿ. ಇವೆಲ್ಲವನ್ನು ಮಾಡುವುದನ್ನು ಬಿಟ್ಟು ತಾವು ಕೇವಲ ಕೆಲವರಿಗೆ ಸಮಾಧಾನವನ್ನು ಮಾಡಲು ಏನು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೀರಿ, ಹೊಸ ಹೊಸ ಸ್ಕೀಮ್‌ಗಳನ್ನು ಮಾಡಿದಿರಿ, ಹೊಸ ಐ.ಟಿ.ಐ. ನ್ನು ಮಾಡುತ್ತೇವೆಂದಿರಿ, welcome. ಶಾಲಾ ಕಾಲೇಜು ಮಾಡುತ್ತೇವೆಂದಿರಿ, ಆದರೆ, ಅದಕ್ಕೇನು ಅನುದಾನವನ್ನು ಇಟ್ಟಿದ್ದೀರೆಂದು ತೋರಿಸಬೇಕು. ಆದರೆ, ಅದಕ್ಕೆ ಎಲ್ಲೂ ಅನುದಾನವನ್ನು ಇಟ್ಟಿಲ್ಲ. ಯಾವ ಕಡೆಯಲ್ಲೂ ಹೇಳಿಲ್ಲ. ಕೇವಲ ಕಾರ್ಯಕ್ರಮವನ್ನು ರೂಪಿಸಿರುವುದನ್ನು ಬಿಟ್ಟರೆ ಆ ಯೋಜನೆಗಳಿಗೆ ಏನನ್ನೂ ಹೇಳಿಲ್ಲ. ಹೆಚ್ಚಿನ ಕಾರ್ಯಕ್ರಮಗಳು ಕಳೆದ ಬಾರಿ ಆದಂತದ್ದು. ಈ ಬಾರಿ ಭಾಗ್ಯಲಕ್ಷ್ಮಿಯ ಬಗ್ಗೆ ಪುನಃ ಹೇಳಿದ್ದೀರಿ. ಕಳೆದ ಬಾರಿಯ ಆಯವ್ಯಯದಲ್ಲಿ ನೀವು ಏನೇನು ಹೇಳಿದ್ದೀರಿ, ಈ ವರ್ಷ ಅದಕ್ಕೆ ಹಣವನ್ನು ಕೊಟ್ಟಿದ್ದೀರಿ. Deposit ಮಾಡಿರುವ receipt ನ್ನು ತಂದು ತೋರಿಸಿದ್ದೀರಿ. ಒಂದು ಆಯವ್ಯಯದಲ್ಲಿ ಹೇಳಿದ ಕಾರ್ಯಕ್ರಮ ಒಂದು ವರ್ಷದ

ನಂತರ ಜಾರಿಗೆ ಬರುತ್ತದೆಂದರೆ ಇದಕ್ಕೆ ಅರ್ಥವೇ ಇಲ್ಲ. ಒಂದು ವರ್ಷದಲ್ಲಿ ಏನೂ ಆಗಲಿಲ್ಲ. Last year ದ್ದು 30–40 ಪರ್ಸೆಂಟ್‌ಗಿಂತ ಜಾಸ್ತಿ ಜಾರಿಗೆ ಬಂದೇ ಇಲ್ಲ. ಈ ವರ್ಷದಲ್ಲಿ ಹೇಳಿದಂತಹ ಕಾರ್ಯಕ್ರಮಗಳು ಮುಂದಿನ ವರ್ಷಕ್ಕೆ ಎಷ್ಟು ಜಾರಿಗೆ ಬರುತ್ತದೆ ನಮಗೆ ಗೊತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :– ತಾವು vague ಆಗಿ ಏನೂ ಹೇಳಬೇಡಿ. ಯಡಿಯೂರಪ್ಪನವರೆ, ಹಿಂದಿನ ಆಯವ್ಯಯದಲ್ಲಿ 1,2,3, ಈ ರೀತಿ ಹತ್ತರಲ್ಲಿ ಇದನ್ನು ಮಾಡಿಲ್ಲ. ಭಾಗ್ಯಲಕ್ಷ್ಮಿಯದು, ಆ ಮಗೂಗೆ ಒಂದು ವರ್ಷವಾಗುವರೆಗೂ eligibility ಇರುತ್ತದೆ. ಕಡೆಯ ಜನವರಿ ಕೊನೆಯವರೆಗೆ ಎಷ್ಟು ಫಲಾನುಭವಿಗಳ ಹೆಸರಿತ್ತೋ ಅವರ ಹೆಸರಿಗೆ 8% interest ಸೇರಿಸಿ ಬ್ಯಾಂಕಿನಲ್ಲಿ ಹಣವನ್ನು deposit ಮಾಡಿದ್ದೇವೆ. ಆ ಮಗೂಗೆ ದುಡ್ಡು ಕೊಡುವುದು 18 ವರ್ಷಗಳ ನಂತರ. ಯಾವುದೇ ಒಬ್ಬ ಫಲಾನುಭವಿ ಭಾಗ್ಯಲಕ್ಷ್ಮಿ ಯೋಜನೆಯಿಂದ ವಂಚಿತರಾಗುವುದಿಲ್ಲ. ಈ ವರ್ಷ ಅದನ್ನು ಮುಂದುವರೆಸಿದ್ದೇವೆ. ಹಣವನ್ನು ಪ್ರಾವಿಜನ್ ಮಾಡಿದ್ದೇವೆ. ಇದನ್ನು ಮಾಡಲು ವರ್ಷಪೂರ್ತಿ ಬೇಕಾ ಎಂದರೆ ನಾನೇನು ಉತ್ತರವನ್ನು ಕೊಡಲಿ?

ಶ್ರೀ ಭಾಗಿರಥಿ ಮರುಳ ಸಿದ್ಧನಗೌಡ :– ಹಿಂದಿನ ವರ್ಷದ ಕಾರ್ಯಕ್ರಮ ಇವತ್ತಿನವರೆಗೂ ಏನೂ ಆಗಿಲ್ಲವಲ್ಲ?

ಶ್ರೀ ಜೆ.ಸಿ. ಮಾಧುಸ್ವಾಮಿ :– ಹೊಸದಾಗಿ ಮದುವೆಯಾಗಿ ಬಂದ ಸೊಸೆಯವರ ಹೆಸರು ಕಾರ್ಡ್‌ನಲ್ಲಿ ಸೇರಿಲ್ಲ. Practical problem ಆಗಿದೆ. ಅವರ ಹೆಸರನ್ನು ಸೇರಿಸುತ್ತಿಲ್ಲ. ಬಿ.ಪಿ.ಎಲ್. ಕಾರ್ಡ್‌ನಲ್ಲಿ ಹೆಸರನ್ನು ತೋರಿಸಿ ಎಂದು ಹೇಳುತ್ತಾರೆ. ಆ ವರ್ಷ ಮದುವೆಯಾದವರ ಹೆಸರು entry ಆಗಿರುವುದಿಲ್ಲ. ಅವರೆಲ್ಲಾ ಈ ಭಾಗ್ಯಲಕ್ಷ್ಮಿ ಸ್ಕೀಮ್ ಕೆಳಗೆ ತಿರುಗುತ್ತಲೇ ಇದ್ದಾರೆ. ಅದಕ್ಕೆ ಏನಾದರೂ ಒಂದನ್ನು ಮಾಡಬೇಕಲ್ಲ?

ಶ್ರೀ ಹೆಚ್.ಕೆ. ಕುಮಾರಸ್ವಾಮಿ :– ಮಾನ್ಯ ಮಾಧುಸ್ವಾಮಿಯವರು ಎತ್ತಿರುವ ಆಕ್ಷೇಪಣೆಗೆ ಉತ್ತರಿಸುವುದಾದರೆ, ಇಲ್ಲಿ ಏಪ್ರಿಲ್ 1ಕ್ಕೆ ಒಂದು ವರ್ಷ ಮುಗಿಯುತ್ತದೆ.

ನಾವು register ಮಾಡಿಸುವುದಕ್ಕೆ ಪುನಃ ಮೂರು ತಿಂಗಳು ಕಾಲಾವಕಾಶ ಮುಂದುವರೆಸುತ್ತಿದ್ದೇವೆ. ತಾಂತ್ರಿಕ ಕಾರಣಗಳಿಗಾಗಿ ತೊಂದರೆಯಾಗಬಾರದೆಂದು ನಾವು ಈ ರೀತಿ ಮಾಡುತ್ತಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಕಳೆದ ಬಾರಿ ನಮ್ಮ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆಯಾದಾಗ, ಅಧಿಕಾರಿಗಳು ಇದೇ ಸಮಸ್ಯೆಯನ್ನು ಹೇಳುತ್ತಿದ್ದರು.

ಶ್ರೀ ಬಿ.ಎಸ್. ಯಡಿಯೂರಪ್ಪ :– ಕಳೆದ ಬಾರಿಯ ಬಜೆಟ್‌ನಲ್ಲಿ ಪ್ರಕಟಿಸಿದ ಯಾವ ಸ್ಕೀಮ್‌ಗಳು ಜಾರಿಯಾಗಿಲ್ಲ ಎಂಬ ಬಗ್ಗೆ ದಯವಿಟ್ಟು ಮಾನ್ಯ ಸದಸ್ಯರು ಪಟ್ಟಿ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ನಾನು ಖಂಡಿತವಾಗಿಯೂ ನಿಮಗೆ ಆ ಮಾಹಿತಿಯನ್ನು ನಾಳೆ ಕೊಡುತ್ತೇನೆ. ನಾನು ಈಗಾಗಲೇ ಅಂತಹ ಯೋಜನೆಗಳ ಪಟ್ಟಿಯನ್ನು ಮಾಡಿಟ್ಟಿದ್ದೇನೆ. ನಾಳೆ ಬೆಳಿಗ್ಗೆ ನಾನು ನಿಮಗೆ ಆ ಪಟ್ಟಿಯನ್ನು ಕೊಡುತ್ತೇನೆ. ಇವತ್ತು ನನಗೆ ಮಾತನಾಡಲು ಅವಕಾಶ ಸಿಗುತ್ತದೆಂದು ನಾನು ಅಂದುಕೊಂಡಿರಲಿಲ್ಲ. ಮಾನ್ಯ ಉಪಾಧ್ಯಕ್ಷರು, ಇವತ್ತೇ ನನ್ನನ್ನು ಮಾತನಾಡಲು ಕರೆದರು, ಆದ್ದರಿಂದ ನಾನು ಮಾತನಾಡಲು ಎದ್ದು ನಿಂತಿದ್ದೇನೆ. ತಾವು ಇಷ್ಟೊಂದು ಯೋಜನೆಗಳನ್ನು ಇದರಲ್ಲಿ ಕಾಣಿಸಿದ್ದೀರಿ. ಪ್ರತ್ಯೇಕವಾಗಿ ಯಾವುದಕ್ಕೆ ಎಷ್ಟು ಹಣವನ್ನು ಇಟ್ಟಿದ್ದೀರಿ ಎಂಬುದು ನಿಮ್ಮ ಬಜೆಟ್‌ನಲ್ಲಿ ಇಲ್ಲ. ಅದಕ್ಕೆ ಯಾವ ರೀತಿಯಾಗಿ ನೀವು ಪ್ರಾವಿಷನ್ ಮಾಡುತ್ತೀರಿ ಎಂದು ಉತ್ತರವನ್ನು ಕೊಡುವಾಗ ಹೇಳಬೇಕಾಗುತ್ತದೆ. Directorate of Social Security and pension set up ಬಗ್ಗೆ, separate Board for welfare of unorganized skilled workers like Tailors, Washer man, Carpenters, Barbers ಎಲ್ಲವನ್ನೂ ಕೂಡ ನೀವು ಬಜೆಟ್‌ನಲ್ಲಿ ಹೇಳಿದ್ದೀರಿ. ಅದಕ್ಕೆ ಯಾವುದರಲ್ಲಿ ಹಣವನ್ನು ಒದಗಿಸಿದ್ದೀರಿ? ಪುನಃ ಪುನಃ ಅದರ ಬಗ್ಗೆ ನಾನು ಚರ್ಚೆಯನ್ನು ಮಾಡಲಿಕ್ಕೆ ಹೋಗುವುದಿಲ್ಲ. ದಯವಿಟ್ಟು ಮುಂದಿನ ಸಾರಿ ಈ ರೀತಿ ಮಾಡಬೇಡಿ. ಯಾವ ಸಂಸ್ಥೆಗಳಿಗೆ ನೀವು ಹಣವನ್ನು ಕೊಟ್ಟಿದ್ದೀರೋ, ಅವರು ಸ್ವತಃ ಹಣವನ್ನು ಸಂಗ್ರಹ ಮಾಡುತ್ತಿದ್ದಾರೆ. ಯಾವ ಸಂಸ್ಥೆಗಳಿಗೆ ನೀವು ಹಣವನ್ನು ಕೊಟ್ಟಿದ್ದೀರೋ ಅದರ

ಬಗ್ಗೆ ಅತ್ಯಂತ ಗೌರವವಿಟ್ಟು ಹೇಳುತ್ತೇನೆ, ಆ ಹಣವನ್ನು ಅವರಿಗೆ ಕೊಡುವಂತಹ ಅವಶ್ಯಕತೆ ಇಲ್ಲವೆಂಬ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲಿಕ್ಕೆ ನಾನು ಇಚ್ಛೆಪಡುತ್ತೇನೆ. ಅದರ ಜೊತೆಗೆ ಇನ್ನೊಂದು, ಯಾವ ಸ್ಥಾನದಲ್ಲಿ ಜ್ಞಾನೋದಯವಾಯಿತು ಎಂಬುದನ್ನು ಹೇಳಬೇಕು. ನಾನು ನಿನ್ನೆ ಹೇಳಿದೆ, ಕಡಲು ಕೊರೆದುಕೊಂಡು ಹೋಗುತ್ತಿದೆ ಎಂದು ನನಗೆ ಕಡಲ ತೀರದಲ್ಲಿ ಜ್ಞಾನೋದಯವಾಯಿತು. ಅದಕ್ಕೆ ಹಣವನ್ನು ಕೊಟ್ಟಿಲ್ಲ. ಸಮುದ್ರ ಕೊರೆತಕ್ಕೆ ಹಣವನ್ನು ಕೊಟ್ಟಿಲ್ಲ. ದಯವಿಟ್ಟು ಅದಕ್ಕಾದರೂ ಸ್ವಲ್ಪ ಹಣವನ್ನು ಒದಗಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಏನು ಜ್ಞಾನೋದಯವಾಗಿದೆ ಎಂಬುದನ್ನು ಯಾರಾದರೂ ಒಬ್ಬರು ನಮಗೆ ಹೇಳಿ. ಇದೇನು ಎಂದು ಅರ್ಥವಾಗುತ್ತಿಲ್ಲ. ಯಾರಿಗೆ ಜ್ಞಾನೋದಯವಾಗಿದೆ? ಬುದ್ಧನಿಗೆ ಜ್ಞಾನೋದಯವಾಗಿ ಏನಾಯಿತು ಎಂದು history ಯಲ್ಲಿ ಬಂದಿದೆ, ಅದನ್ನು ನಾವು ಓದಿ ಬಿಟ್ಟಿದ್ದೇವೆ. ಯಾರ್ಯಾರಿಗೆ ಎಲ್ಲೆ ಏನೇನು ಜ್ಞಾನೋದಯವಾಯಿತು ಎಂಬುದನ್ನು ಯಾರಾದರೂ ಹೇಳಿ. ಏಕೆಂದರೆ ಅದಕ್ಕೆ exchequer ನಿಂದ ದುಡ್ಡು ಕೊಡುತ್ತಿದ್ದೀರಿ.

ಶ್ರೀ ಕೆ. ಶ್ರೀನಿವಾಸಗೌಡ :- ಜ್ಞಾನೋದಯವಾಯಿತು ಎಂಬುದನ್ನು ಒಬ್ಬೊಬ್ಬರು ಒಂದೊಂದು ತರಹ ಅರ್ಥೈಸಿಕೊಳ್ಳುತ್ತಾರೆ. ಅವರಿಗೆ ಆದ ಜ್ಞಾನೋದಯ ನನಗೂ ಆಗಲಿ ಎಂದು ಮಾನ್ಯ ಯಡಿಯೂರಪ್ಪನವರು ಅದನ್ನು ಕೊಟ್ಟಿರಬಹುದು. ಅದಕ್ಕೇಕೆ ನೀವು ಅಷ್ಟೊಂದು ಸಿಟ್ಟು ಮಾಡಿಕೊಳ್ಳುತ್ತೀರಿ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಯಾರಿಗೆ ಏನು ಜ್ಞಾನೋದಯವಾಗಿದೆ ಎಂಬುದನ್ನಾದರೂ ತಾವು ತಮ್ಮ ಉತ್ತರದಲ್ಲಿ ಹೇಳಬೇಕು. ಅದು ನಮಗೆ ಅಥವಾ ಸದನಕ್ಕೆ ಮಾತ್ರವಲ್ಲ, ಇಡೀ ರಾಜ್ಯದ ಜನತೆಗೂ ಕೂಡ ಗೊತ್ತಾಗಬೇಕಾಗಿದೆ. Agricultural sector ನಲ್ಲಿ ತಾವೇ ಒಪ್ಪಿದಂತೆ ಶೇಕಡ 2ರಷ್ಟು growth ಆಗಿದೆ. ಹಿಂದಿಗಿಂತ ಬಹಳಷ್ಟು ಕಡಿಮೆಯಾಗಿದೆ. ಸಮಯದ ಅಭಾವ ಇರುವುದರಿಂದ ನಾನು ಹೆಚ್ಚು ಮಾತನಾಡಲಿಕ್ಕೆ ಹೋಗುವುದಿಲ್ಲ. Food grain production ಟಾರ್ಗೆಟ್‌ಗಿಂತ 25% ಮತ್ತು Oil seed production ಟಾರ್ಗೆಟ್‌ಗಿಂತ 40% ಕಡಿಮೆಯಾಗುವ ಸಂಭವವಿದೆ ಎಂದು ತಾವು ಹೇಳಿದ್ದೀರಿ.

ಇಷ್ಟು ಒಂದೇ ಸಲಕ್ಕೆ ಕಡಿಮೆಯಾಗಿ ಬಿಟ್ಟರೆ ಹೇಗೆ? Pulses ಕೂಡ ಇಲ್ಲ. Seed production ಅನ್ನು global market ಆಗಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳುತ್ತೀರಿ,. ಅದು ಹೇಗೆ ಆಗುತ್ತದೆ? ಇಷ್ಟು production ಒಂದು ಕಡೆಯಲ್ಲಿ ಕಡಿಮೆಯಾಗುತ್ತಾ ಹೋದರೆ, ಇನ್ನೊಂದು ಕಡೆಯಲ್ಲಿ global market ಅನ್ನು ಮಾಡುತ್ತೇವೆ ಎಂದು ಹೇಳುತ್ತಾ ಹೋದರೆ, ಅದು ಎಲ್ಲಿಗೆ ಹೋಗಿ ಮುಟ್ಟುತ್ತದೆ? ಯಾವುದಕ್ಕೆ ಏನು plan ಹಾಕಿದ್ದೀರಿ? ಅದರ criteria ಏನು ಮಾಡಿದ್ದೀರಿ? ಈ seed production increase ಮಾಡಲಿಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ? ಅಥವಾ ಪ್ರಯತ್ನಗಳನ್ನು ಮಾಡುತ್ತಿದ್ದೀರಿ. ಅದರ ಬಗ್ಗೆ ಏನೇನೂ ಮಾಹಿತಿಯನ್ನು ಇದರಲ್ಲಿ ಕೊಟ್ಟಿಲ್ಲ. ಮಾನ್ಯ ಯಡಿಯೂರಪ್ಪನವರೇ, ರೈತರ ಸಾಲ ಮನ್ನಾ ಮಾಡಿದ ರೀತಿ ಮೀನುಗಾರರು ಮತ್ತು weavers ಗೂ ಮಾಡುತ್ತೇವೆ ಎಂಬುದಾಗಿ ಹೇಳಿದ್ದೀರಿ. ಈ ಬಗ್ಗೆ ನಮ್ಮ ಶ್ರೀರಾಮರೆಡ್ಡಿಯವರು ಹೇಳಿದರು. ಹಿಂದೆ ಬಜೆಟ್ ಅನ್ನು ತಾವು ಮಂಡನೆ ಮಾಡಿ, ಬ್ರಹ್ಮಾವರಕ್ಕೆ ಬಂದಾಗ, ಅದೇ ದಿವಸ ಇಲ್ಲಿ ಚರ್ಚೆ ಪ್ರಾರಂಭ ಆಗಿತ್ತು. ಅವತ್ತಿನಿಂದ ಇವತ್ತಿನವರೆಗೆ ಆ ಸಮಸ್ಯೆಯೇ ಪರಿಹಾರವಾಗಿಲ್ಲ. ನಾವು ಧರಣಿ ಮಾಡಿದರೂ ಸಮಸ್ಯೆ ಪರಿಹಾರವಾಗಲಿಲ್ಲ. ನೀವು ಸಮನ್ವಯ ಸಮಿತಿಯ ಸಭೆಯ ನಂತರ ಉತ್ತರ ಹೇಳುತ್ತೇನೆ ಎಂದು ಹೇಳಿದಿರಿ. ಆದರೆ ಇನ್ನೂ ನಮಗೆ ಆ ಬಗ್ಗೆ ಉತ್ತರವೇ ಬರಲಿಲ್ಲ. ನಮಗೆ ಬೇರೆ ದಾರಿಯಿಲ್ಲ, ಇನ್ನು ಒಂದೇ ದಿವಸ ಉಳಿದಿದೆ, ನಾಳೆ ಅಥವಾ ನಾಡಿದ್ದು ನೀವು ಉತ್ತರ ಕೊಡುವವರೆಗೆ ನಾವು ಕಾಯಬೇಕಾಗುತ್ತದೆ, ನಾವು ಕಾಯುತ್ತೇವೆ. ಆದರೆ, ನಾನೇನು ಹೇಳುತ್ತೇನೆ ಎಂದರೆ, ನೀವು ಕೇವಲ 25 ಸಾವಿರ ರೂಪಾಯಿಗಳ ಸಾಲ ಪಡೆದವರಿಗೆ ಮಾತ್ರ ಮನ್ನಾ ಮಾಡಿದ್ದರೆ, ಸೊಸೈಟಿಗೆ ಯಾವ ಹಣವೂ ವಾಪಸ್ ಬರುತ್ತಿರಲಿಲ್ಲ. ಏಕೆಂದರೆ, ನೀವು ವಜಾ ಮಾಡಿದ್ದು, ಅಲ್ಲಿಗೇ ಮುಕ್ತಾಯವಾಗುತ್ತಿತ್ತು. ಈಗ 50 ಸಾವಿರ ರೂಪಾಯಿಗಳೆಂದು ಮಾಡಿದ್ದೀರಿ. 50 ಸಾವಿರ ರೂಪಾಯಿಗಳಲ್ಲಿ ಹೆಚ್ಚೆಂದರೆ 20 ಸಾವಿರ ರೂಪಾಯಿಗಳನ್ನು ವಾಪಸ್ ಕಟ್ಟುವಂತಹ ಪರಿಸ್ಥಿತಿ ಬರುತ್ತದೆ. ಆದರೆ ಯಾರು ದೊಡ್ಡ ಮೊತ್ತದ ಸಾಲವನ್ನು ಪಡೆದಿದ್ದಾರೋ, ಅವನು 25 ಸಾವಿರ ರೂಪಾಯಿಗಳನ್ನು

ವಾಪಸ್ ಕಟ್ಟಲಿಕ್ಕೆ ಅವಕಾಶ ಸಿಗುತ್ತದೆಯೇ? ನೀವು ಅವನಿಗೆ ಅವಕಾಶವನ್ನು ಮಾಡಿಕೊಟ್ಟರೆ, ಆತ ಸಂಪೂರ್ಣ ಹಣವನ್ನು ವಾಪಸ್ ಕಟ್ಟಿ, ಈ ಸಹಕಾರಿ ಸಂಸ್ಥೆಗಳಿಗೆ ಹಣ ವಾಪಸ್ ಬರುವಂತಹ ಸಾಧ್ಯತೆ ಇದೆ. ಆದರೆ, ನೀವು ಈ land bank ವರಿಗೆ ಇದರ benefit ಅನ್ನು extend ಮಾಡಿಲ್ಲ. ಅವರ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ನೀವು ಅವರಿಗೂ ಇದನ್ನು extend ಮಾಡಬೇಕಾಗುತ್ತದೆ. ಈ ಬಗ್ಗೆ land bank ಅಧ್ಯಕ್ಷರು ಪ್ರತಿಯೊಬ್ಬ ಶಾಸಕರಿಗೂ ಪತ್ರವನ್ನು ಬರೆದಿದ್ದಾರೆ. ಹಿಂದಿನವರು ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿದ್ದರು, ಅದಕ್ಕೂ ಹಣವನ್ನು ಒದಗಿಸಿಲ್ಲ. Irrigation Sector ನಲ್ಲಿ ಹೋದ ವರ್ಷಕ್ಕಿಂತ ಕಡಿಮೆ ಹಣವನ್ನು ಒದಗಿಸಲಾಗಿದೆ. ಈ ವರ್ಷ 3683 ಕೋಟಿ ರೂಪಾಯಿಗಳನ್ನು for capital works in major and minor irrigation ಒದಗಿಸಲಾಗಿದೆ. ಅದನ್ನು ಹೋದ ವರ್ಷಕ್ಕೆ ಹೋಲಿಸಿ ನೋಡಿದಾಗ, ಈ ವರ್ಷ 1 ಸಾವಿರ ಕೋಟಿ ರೂಪಾಯಿಗಳು ಕಡಿಮೆಯಾಗುತ್ತದೆ. ಇವತ್ತು ಜಾಸ್ತಿಯಾಗಿರುವ SR rates ಜೊತೆಗೆ ಅದನ್ನು ಲೆಕ್ಕ ಹಾಕಿ ನೋಡಿ. ಕೇವಲ ನೀವು ಹಣವನ್ನು ಕಡಿಮೆ ಮಾತ್ರ ಇಟ್ಟಿಲ್ಲ, SR rates ಕೂಡ ಜಾಸ್ತಿಯಾಗಿದೆ. ಒಂದಂತೂ ನಿಜ, ಇದರಲ್ಲಿ ರೈತರಿಗೆ ಆದಂತಹ ಲಾಭಕ್ಕಿಂತ ಅದನ್ನು ಮಾಡಿಸುವ ಗುತ್ತಗೆದಾರರಿಗೆ ಬಹಳಷ್ಟು ಲಾಭವಿದೆ. Over the years, ಬಹಳಷ್ಟು ಹಣ ಸೋರಿ ಹೋಗಿದೆ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಅದನ್ನು ನೋಡಿದಾಗ, ಇದು ಸರಿಯಾಗಿ ಖರ್ಚಾದರೆ ಇಷ್ಟು ಹಣ ಸಾಕಾಗುತ್ತದೆ. ಆದರೆ SR rates ಜಾಸ್ತಿಯಾಗಿದೆ. ಇದು ಕೇವಲ ಈ ಇಲಾಖೆಗೆ ಮಾತ್ರವಲ್ಲ. PWD works ಅಥವಾ ZP works ಯಾವುದಕ್ಕಾದರೂ ಸಹ, SR rates ಗಮನದಲ್ಲಿಟ್ಟುಕೊಂಡು ನೀವು ಕೊಡುವಂತಹ ಹಣಕ್ಕೆ ಲೆಕ್ಕಾಚಾರವನ್ನು ಹಾಕಿ ನೋಡಿದಾಗ, inflation ಲೆಕ್ಕಾಚಾರ ಹಾಕಿ ನೋಡಿದಾಗ, ಸರಿಯಾಗಿ ಕೆಲಸವನ್ನೇ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. Flood control ಗೆ ನಮ್ಮಲ್ಲಿರುವ ಸಮಸ್ಯೆಯನ್ನು ನಾನು ಹೇಳುತ್ತೇನೆ. ಇದಕ್ಕಾಗಿ ಕೇಂದ್ರದಿಂದ ಬಂದ ದುಡ್ಡನ್ನು ನೀವು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೀರಿ. ಜಿಲ್ಲಾಧಿಕಾರಿಗಳ ಕಚೇರಿಗೆ ಕೊಟ್ಟಂತಹ ಹಣ ಇವತ್ತೂ ಸಹ

ಖರ್ಚಾಗಿಲ್ಲ. ಹಿಂದಿನ ವರ್ಷ ಮಾಡಿದ ಕೆಲಸಕ್ಕೆ third party inspection ಎಂದು ಮಾಡಿದ್ದಾರೆ. ಅದನ್ನು Engineers ಮಾಡುವುದಿಲ್ಲ. Revenue Department ನವರು Engineering division ನವರು ಮಾಡಿರುವ ಕೆಲಸದ inspection ಮಾಡಿ, ಎರಡು ವರ್ಷದ ಹಿಂದೆ ಮಾಡಿದ ಕೆಲಸ ಕಳಪೆ ಕಾಮಗಾರಿ ಎಂದು ಹೇಳಿ, ಇವತ್ತು ಅದಕ್ಕೆ payment ಅನ್ನು ಮಾಡದೆ, ಆ contractor ಗೆ ದುಡ್ಡು ಸಿಗದೆ, ಈ ವರ್ಷ contractor ಗಳ್ಯಾರೂ ಕೆಲಸ ಮಾಡಲಿಕ್ಕೆ ಮುಂದೆ ಬರುತ್ತಿಲ್ಲ. ಅದಲ್ಲದೆ ಇವರು ಅನುಮತಿಯನ್ನೇ ಕೊಡುತ್ತಿಲ್ಲ. ಇದೊಂದು ದೊಡ್ಡ ದುರಂತ. ನೀವು ಕೊಟ್ಟ ಹಣವನ್ನು ಖರ್ಚು ಮಾಡದೆ, Utilization Certificate ಕೊಡದೆ, ಹೆಚ್ಚು ಹಣವನ್ನು ಕೇಳಲಿಕ್ಕೆ ಆಗುತ್ತಿಲ್ಲ. ನೀವು ಪುನಃ DC ಹತ್ತಿರ ದುಡ್ಡು ಇದೆ ಎಂದು ಹೇಳುವಂತಹ ಪರಿಸ್ಥಿತಿ ಬಂದಿದೆ. ಇದರ ಬಗ್ಗೆ ತಾವು ಸ್ವಲ್ಪ ವಿಚಾರಣೆಯನ್ನು ಮಾಡಬೇಕಾಗುತ್ತದೆ. ಅದಕ್ಕಾಗಿ ರಚಿಸಿರುವ ಸಬ್ ಕಮಿಟಿಯ ಅಧ್ಯಕ್ಷರು ಮಾನ್ಯ ಪ್ರಕಾಶ್‌ರವರು ಇರಬೇಕೆಂದು ಕಾಣುತ್ತದೆ. ದಯವಿಟ್ಟು ಇದರ ಬಗ್ಗೆ ಮಾಹಿತಿಯನ್ನು ತರಿಸಿಕೊಳ್ಳಬೇಕು. ನಮ್ಮ ಜಿಲ್ಲೆಯಲ್ಲಿ ಇವತ್ತಿನವರೆಗೆ flood damage ನ ಒಂದೇ ಒಂದು ಕೆಲಸ ಕೂಡ ಪ್ರಾರಂಭವಾಗಿಲ್ಲ. ಹೋದ ವರ್ಷ ಮಾಡಿದ ಕೆಲಸಕ್ಕೆ ಹಣ ಇನ್ನೂ ಪಾವತಿಯಾಗಿಲ್ಲ. ಒಂದೂವರೆ ವರ್ಷವಾದರೂ ಇನ್ನೂ ಪಾವತಿಯಾಗಿಲ್ಲ. ಅದರ ಬಗ್ಗೆ ಮಾಹಿತಿಯನ್ನು ತರಿಸಿಕೊಳ್ಳಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಸ್ತ್ರೀ ಶಕ್ತಿ ಸಂಘಗಳಿಗೆ ಶೇ.4% ಬಡ್ಡಿದರದಲ್ಲಿ ಸಾಲವನ್ನು ಕೊಡಿಸುತ್ತೇನೆ ಎಂದು ಹೇಳಿದ್ದೀರಿ. ಸಂಘಗಳಿಗೆ ಕೊಡಿಸುತ್ತೀರಾ? ಅಥವಾ ಸಂಘಗಳ individual members ಗೆ ಕೊಡಿಸುತ್ತೀರೋ ಎಂಬ ಬಗ್ಗೆ clarify ಮಾಡಬೇಕು. ಏಕೆಂದರೆ, ನಮ್ಮ ಜಿಲ್ಲೆಯಲ್ಲಿ 'ನವೋದಯ ಸಂಘ' ಎಂಬುದೊಂದು ಇದೆ, 'ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘ' ಎಂಬುದೊಂದು ಇದೆ. ಅಲ್ಲಿ individual members ಗೆ ಸಾಲವನ್ನು ಕೊಡುವುದರಿಂದ ಅವರು ಈ ಸಾಲವನ್ನು ತೆಗೆದುಕೊಳ್ಳುತ್ತಿಲ್ಲ. ಅಲ್ಲೇನಾಗುತ್ತಿದೆ ಎಂದರೆ, ಅವರು 11% ನಲ್ಲಿ ಸಾಲವನ್ನು ಕೊಡುತ್ತಾರೆ. ಇಲ್ಲಿ ಶೇ.4% ಬಡ್ಡಿ ದರದಲ್ಲಿ ತಾವೇನು ಸಾಲವನ್ನು, ಕೊಡುತ್ತೀರೋ, ಅದನ್ನು ಸಂಘಗಳಿಗೆ

ಕೊಡುವುದಕ್ಕಿಂತ ಸಂಘದ ಸದಸ್ಯರಿಗೆ, individual members ಗೆ ಕೊಡಿ. ಇದರಿಂದ ಅವರಿಗೆ ಹೆಚ್ಚು ಸಹಾಯವಾಗುತ್ತದೆ. ಇಲ್ಲವೆಂದರೆ ಅವರಿಗೆ ಅದರಿಂದ ಏನೂ ಸಹಾಯವಾಗುವುದಿಲ್ಲ. ಏಕೆಂದರೆ, ನಮ್ಮಲ್ಲಿ ಗುಂಪಾಗಿ ಏನೂ ವ್ಯವಹಾರವನ್ನು ಅಥವಾ business ಅನ್ನು ಮಾಡುತ್ತಿಲ್ಲ. ಸಂಘದ ಸದಸ್ಯರು ಮಾತ್ರ ಆಗಿದ್ದಾರೆ ಎಂಬುದನ್ನು ಬಿಟ್ಟರೆ ಸಂಘದಿಂದ ಅವರು ಯಾವ benefit ಅನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗುತ್ತಿಲ್ಲ ಎಂದು ಹೇಳಬಯಸುತ್ತೇನೆ. ಇನ್ನು Co-operative institutions ಬಗ್ಗೆ ಹೇಳುವುದಾದರೆ, ಮೊನ್ನೆ ನಾವು ಚರ್ಚೆ ಮಾಡಿದ ಹಾಗೆ dates ಬಗ್ಗೆ ತೊಂದರೆಯಾಗಿದೆ. ನೀವು 1.2.2006ರ ನಂತರದ ಸಾಲವೆಂದು ಹೇಳುತ್ತೀರಿ. ಆ cut-off date ಅನ್ನು ತೆಗೆಯಬೇಕಾಗುತ್ತದೆ. ಇಲ್ಲದಿದ್ದರೆ ಅದರ ಹಿಂದೆ ಸಾಲ ತೆಗೆದುಕೊಂಡವರಿಗೆ ಏನೂ benefit ಆಗುವುದಿಲ್ಲ. ಇದರಿಂದ ನೀವು ರೈತರಿಗೆ ಸಹಾಯವನ್ನೇನೂ ಮಾಡಿದಂತಾಗುವುದಿಲ್ಲ. ಕೇವಲ 'ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ, ರೈತರಿಗೆ ಸಾಲ ಮನ್ನಾ ಮಾಡಿ ಸಹಾಯ ಮಾಡಿದ್ದೇವೆ' ಎಂದು ನೀವು ಹೇಳಿಕೊಳ್ಳಬೇಕಾಗುತ್ತದೆ. ಅದರ ಹಿಂದಿನವರಿಗೆ ಕೊಡದಿದ್ದರೆ ಯಾವುದೇ benefit ಆಗುವುದಿಲ್ಲ. ಜೂನ್ 30ರವರೆಗೆ extend ಮಾಡುವಂತಹ ವ್ಯವಸ್ಥೆ ಆಗಬೇಕಾಗುತ್ತದೆ ಎಂದು ತಮ್ಮನ್ನು ಕೇಳಲಿಕ್ಕೆ ನಾನು ಇಚ್ಛೆಪಡುತ್ತೇನೆ. "Global seed destination" programme ಬಗ್ಗೆ ತಾವು ಹೆಚ್ಚಿನ ಮಾಹಿತಿಯನ್ನು ಒದಗಿಸಿಕೊಡಬೇಕೆಂದು ಕೋರುತ್ತೇನೆ. ಇನ್ನು "Horticulture Mission" scheme ಬಗ್ಗೆ ಹೇಳುವುದಾದರೆ, ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಹಣ ಬಂದಿದೆ, ಆದರೆ ಏನೂ ಕೆಲಸವಾಗಿಲ್ಲ. ಈ ಕಾರ್ಯಕ್ರಮದ ಅಡಿಯಲ್ಲಿ ಏನಾಗಿದೆ ಎಂಬ ಬಗ್ಗೆ ಮಾಹಿತಿಯನ್ನು ಕೊಡಬೇಕು. ಕೇಂದ್ರ ಸರ್ಕಾರದಿಂದ ಬಂದಿರುವ ಹಣವನ್ನು utilize ಮಾಡಿಕೊಳ್ಳದೆ, ಕೇಂದ್ರ ಸರ್ಕಾರಕ್ಕೆ 'utilization Certificate' ಅನ್ನು ಕಳುಹಿಸಿಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲ. 'utilization Certificate' ಕೊಡಲಿಕ್ಕಾಗದೆ ಪುನಃ ಹಣವನ್ನು ಅವರಿಂದ ಕೇಳಲಿಕ್ಕಾಗುತ್ತಿಲ್ಲ. ಈ ರೀತಿಯ ಒಂದು ಸಮಸ್ಯೆಗೆ ನಾವು ಸಿಕ್ಕಿ ಹಾಕಿಕೊಂಡಿದ್ದೇವೆ. ರೀಜನಲ್ imbalance ಬಗ್ಗೆ ತಾವು ಹೇಳಿದಿರಿ. ಮಾನ್ಯ ಮಾಧುಸ್ವಾಮಿಯವರು

ಮಾತನಾಡುವಾಗ ನೀವು appreciate ಮಾಡುವುದಿಲ್ಲವಾ ಎಂದು ಕೇಳಿದಿರಿ. ಆಯಿತು appreciate ಮಾಡುತ್ತೇವೆ. ಉತ್ತರ ಕರ್ನಾಟಕ ಅಭಿವೃದ್ಧಿ ಕುಂಠಿತವಾಗಿದೆ, ಅದಕ್ಕೆ ಇಲ್ಲಿ 1500 ಕೋಟಿ ರೂಪಾಯಿಗಳನ್ನು ಎಲ್ಲಿ provision ಮಾಡಿದ್ದೀರಿ ಎಂದು ತೋರಿಸತಕ್ಕಂಥದ್ದು ಒಂದು. ನೀವು ಇದಕ್ಕೆ provision ಅನ್ನೇ ಮಾಡಿಲ್ಲ. ಅದರ ಜೊತೆಗೆ ಅವರು ಇನ್ನೊಂದು ಮಾಹಿತಿಯನ್ನು ಏನು ಕೇಳಿದ್ದಾರೆ, ಯಾವತ್ತು ವರದಿಯನ್ನು ಕೊಟ್ಟಿದ್ದಾರೆ, ಅಂದಿನಿಂದ ಇಂದಿನವರೆಗೆ ಎಷ್ಟು ಅನುದಾನವನ್ನು ಅಲ್ಲಿ ಕೊಟ್ಟಿದ್ದೀರಿ ? ನಮ್ಮಲ್ಲಿಗೆ ಎಷ್ಟು ಅನುದಾನವನ್ನು ಕೊಟ್ಟಿದ್ದೀರಿ? ನಮಗಿಂತ ಕಡಿಮೆ ಏನು ಕೊಟ್ಟಿದ್ದೀರಿ? ಅದಕ್ಕೆ ಹೋಲಿಕೆ ಮಾಡಿ ಕೊಡಿ. ನಾನು ಹಿಂದೊಮ್ಮೆ ಇದೇ ಸದನದಲ್ಲಿ ಹೇಳಿದ್ದೆ.

ಶ್ರೀ ಅಮರೇಗೌಡ ಬಯ್ಯಾಪುರ :- ಮಾನ್ಯ ಹೆಗಡೆಯವರೇ, ಕೇವಲ ಉತ್ತರ ಕರ್ನಾಟಕ ಅಲ್ಲ. ನಂಜುಂಡಪ್ಪನವರ ವರದಿ ಆಧರಿಸಿ ಚಾಮರಾಜನಗರ ಕೂಡ ಅದರಲ್ಲಿ ಸೇರಿದೆ. ಆದ್ದರಿಂದ ಕೇವಲ ಉತ್ತರ ಕರ್ನಾಟಕ ಅದರಲ್ಲಿ ಸೇರುವುದಿಲ್ಲ. ರೆಕಾರ್ಡ್‌ಗೆ ಹೋಗಲಿ ಎಂದು ಹೇಳಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಚಾಮರಾಜ ನಗರಕ್ಕೆ ಅನುದಾನ ಕೊಡಿ. ನಾನೇನು ಹೇಳುತ್ತೇನೆಂದರೆ, ಹಿಂದೆ ಕೊಟ್ಟಂತಹ ಅನುದಾನಗಳು ಏನಾಗಿವೆ, ಅದರ ಬಗ್ಗೆ ಕೂಡ ಲೆಕ್ಕ ಬೇಕು. ಬೇರೆ ಎಲ್ಲಾ ಜಿಲ್ಲೆಗಳಿಗೆ ಕೊಟ್ಟಷ್ಟೇ ಹಣವನ್ನು ಕೊಟ್ಟಿದ್ದೀರಿ. ಅದು ಏನಾಗಿದೆ ಎಂಬ ಬಗ್ಗೆ ಮಾಹಿತಿ ಬೇಕಾಗಿದೆ. ನಮ್ಮನ್ನು ಬೀದರ್, ಗುಲ್ಬರ್ಗಾ ಮತ್ತು ಬಿಜಾಪುರದ ತರಹ ಮಾಡಬೇಡಿ. ಅವರನ್ನು ತೆಗೆದುಕೊಂಡು ಬಂದು ಉಡುಪಿ ಮತ್ತು ಮಂಗಳೂರು ಅಥವಾ ಉತ್ತರ ಕರ್ನಾಟಕದ ಹಾಗೆ ಅಭಿವೃದ್ಧಿಯನ್ನು ಮಾಡಲಿಕ್ಕೆ ಪ್ರಯತ್ನವನ್ನು ಮಾಡಿ. ಪ್ರತಿ ಸಲ ಅನುಪಾತ ಹೆಚ್ಚು ಕಡಿಮೆ ಆಗಿದೆ. Road development ಬಗ್ಗೆ ನಾನು ಒಂದು ಹೇಳುತ್ತೇನೆ. Length of the road and climatic condition ಎರಡನ್ನೂ ಲೆಕ್ಕ ಹಾಕಿ. ಅದಕ್ಕೆ ಹಣವನ್ನು ಕೊಡಿ. ನಮ್ಮಲ್ಲಿ ಮಳೆ ಜಾಸ್ತಿ ಇದೆ. ಮಳೆ ಜಾಸ್ತಿ ಇದ್ದರೆ ರಸ್ತೆಗಳು ಹಾಳಾಗುತ್ತವೆ. ಪ್ರತಿ ವರ್ಷ ರಸ್ತೆಗಳು ಹಾಳಾಗುತ್ತವೆ. ಪ್ರತಿ ವರ್ಷ damage ಆಗುತ್ತದೆ. ಅದಕ್ಕೆ ಹಣವನ್ನು ನೀಡಲಿಕ್ಕೆ ಏನು ವ್ಯವಸ್ಥೆ ಆಗುತ್ತದೆ?

ಇದನ್ನು ಲೆಕ್ಕ ಹಾಕದೇ ಅನುದಾನವನ್ನು ಕೊಡುವ ವ್ಯವಸ್ಥೆ ಸರಿಯಲ್ಲವೆಂದು ನಾನು ತಮಗೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. S.R rate ಬಗ್ಗೆ ಪುನಃ ಒತ್ತನ್ನು ಕೊಡುತ್ತೇನೆ. ಏಕೆಂದರೆ SR rate ಜಾಸ್ತಿಯಾಗಿರುವುದು 40 ರಿಂದ 50% ವರೆಗೆ ಜಾಸ್ತಿಯಾಗಿದೆ. ಕಳೆದ ವರ್ಷ ನಾವು ಒಂದು ಕಿ.ಮೀ ರಸ್ತೆಯನ್ನು ಆರು ಲಕ್ಷ ರೂಪಾಯಿಗಳಲ್ಲಿ ಮಾಡುತ್ತಿದ್ದೆವು, ಈ ವರ್ಷ 12 ಲಕ್ಷ ರೂಪಾಯಿಗಳು ಬೇಕಾಗುತ್ತವೆ. Temple ಗಳಿಗೆ ನೇರವಾಗಿ ಹೆಚ್ಚಿನ ಹಣವನ್ನು ಕೊಟ್ಟಿದ್ದೀರಿ. ಈ ಹಣವನ್ನು ಮುಜರಾಯಿ ಇಲಾಖೆಯಲ್ಲಿ ಕೊಡಿ. ಬೇರೆ ಬೇರೆ ಇಲಾಖೆಗಳ ಅಭಿವೃದ್ಧಿಯೇನು ಮಾಡುತ್ತಿದ್ದೀರಿ, ಆ ಇಲಾಖೆಗೆ ಕೊಟ್ಟಂತಹ ಹಣದ ಮುಖೇನ ಮಾಡಿ. ಅದು ಬಿಟ್ಟು ನೇರವಾಗಿ ಹಣವನ್ನು ಕೊಡುವಂತಹ ವ್ಯವಸ್ಥೆ ತಪ್ಪು ಎಂದು ನಾನು ತಮಗೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಯಕ್ಷಗಾನ ಅಕಾಡೆಮಿಗೆ 20 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದು ಯಾವುದಕ್ಕೂ ಪ್ರಯೋಜನವಾಗುವುದಿಲ್ಲ. ಇನ್ನೊಂದು ಮಾಡಿದ್ದೀರಿ. ಕುಪ್ಪಂನಲ್ಲಿರುವಂತಹ ವಿಶ್ವವಿದ್ಯಾನಿಲಯಕ್ಕೆ 10 ಲಕ್ಷ ರೂಪಾಯಿಗಳನ್ನು ತುಳು ಭಾಷೆಯ ಅಭಿವೃದ್ಧಿಗಾಗಿ ಕೊಟ್ಟಿದ್ದೀರಿ. ಮಂಗಳೂರು ಯೂನಿವರ್ಸಿಟಿಗೆ ಕೊಡಬಹುದಿತ್ತು. ಏಕೆಂದರೆ ಮಂಗಳೂರಿನಲ್ಲಿ ಹೆಚ್ಚು ತುಳು ಮಾತನಾಡುವವರು ಇರುವುದು. ಕುಪ್ಪಂನಲ್ಲಿ ಹೋಗಿ ತುಳು ಭಾಷೆ study ಮಾಡಲಿಕ್ಕೆ ಸಾಧ್ಯವಾಗುತ್ತದೆಯೇ? ದಯವಿಟ್ಟು ನೀವು ಅದನ್ನು ಮರುಪರಿಶೀಲನೆ ಮಾಡಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಅದನ್ನು ಕೊಡಬೇಕು. ನಮ್ಮ ಕಂದಾಯ ಸಚಿವರು ಇಲ್ಲಿ ಇಲ್ಲ. ಎಲ್ಲವನ್ನೂ decentralize ಮಾಡುತ್ತಾ ಹೋದರೆ ಇನ್ನೊಂದು ಕಡೆ ಕೇವಲ centralize ಮಾಡುತ್ತಿದ್ದಾರೆ. RTC correction ದು RRD ದು ಪ್ರತಿಯೊಂದಕ್ಕೂ correction ಸಮೇತ ಕೇಂದ್ರದಿಂದ ವ್ಯವಸ್ಥೆಯಾಗಬೇಕು. RTC ಯನ್ನು ಸೀನಿಯಾರಿಟಿ ಪ್ರಕಾರ ಕೊಡುವುದು ಎಂದು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಿಗೆ ಗೊತ್ತಿದೆ. ಒಂದೊಂದು RTC ಸಿಗಬೇಕಾದರೆ ಆರಾರು ತಿಂಗಳು, ಒಂದೊಂದು ತಿಂಗಳುಗಳ ಕಾಲ ತಡವಾಗುತ್ತಿದೆ. ಇದು computer ನಲ್ಲಿಯೇ ಆಗುತ್ತಿದೆ. Computer ನಲ್ಲಿಯೇ ಈ ಸಮಸ್ಯೆ ಇದೆ. ನೇರವಾಗಿ Village Accountant ಗೆ ಕೊಡುವುದಾಗಿದ್ದರೆ ಅಲ್ಲಿಯೇ ಹೋಗಿ

ಕೊಟ್ಟು ತೆಗೆದುಕೊಂಡು ಬರಲಿಕ್ಕೆ ಸಾಧ್ಯವಿತ್ತು. ಇದು ಬೆಂಗಳೂರಿನಲ್ಲಿ correction ಆಗಬೇಕಾಗಿದೆ. Software correction ನಲ್ಲಿ ಇವರು ಕೊಡುತ್ತಿಲ್ಲ.

ಶ್ರೀ ಎನ್. ಯೋಗೀಶ್ ಭಟ್ :– ಮಾನ್ಯ ಹೆಗ್ಡೆಯವರೇ, RTC ಕೊಡುವ ಸಂದರ್ಭದಲ್ಲಿ ಒಂದು ಸಣ್ಣ ತಪ್ಪಾಯಿತು. ಹೆಸರು ಬರೆಯುವಂತಹ ಸಂದರ್ಭದಲ್ಲಿ ಒಂದು alphabetical error ಆಯಿತು. ಅದಕ್ಕೆ ಪುನಃ ಆರು ತಿಂಗಳು ಮುಂದೆ ಹೋಗುತ್ತದೆ. ಏಕೆಂದರೆ ಅವರು ಅದೇ procedure follow ಮಾಡಿಕೊಂಡು ಬರಬೇಕು. ಅಂತಹ ಸಂದರ್ಭದಲ್ಲಿ ತಕ್ಷಣ ಅಲ್ಲಿರುವಂತಹ ತಹಶೀಲ್ದಾರ್‌ರವರಿಗೆ ಅದನ್ನು authorize ಮಾಡುವುದು ಮಾಡಿದರೆ ಬಹಳ ಸುಲಭವಾಗಿ ಮತ್ತು ಸರಳವಾಗಿ ಆಗಲಿಕ್ಕೆ ಸಾಧ್ಯವಿದೆ. ಹಿಂದಿನ procedure ಪ್ರಕಾರ EC ಯಿಂದಲೇ ಬರಬೇಕು, ಇಲ್ಲಿಂದಲೇ ಎಲ್ಲ scrutiny ಆಗಿ ಬರಬೇಕು, ಎಂದು ಬರುತ್ತದೆ. ಕೇವಲ ಒಂದು ಅಕ್ಷರದಲ್ಲಿ ವ್ಯತ್ಯಾಸವಾದರೂ ಕೂಡ ಹೀಗಾಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– Revenue Department ನ ಇನ್ನೊಂದು ದೊಡ್ಡ ಸಮಸ್ಯೆ ಎಂದರೆ, land grabbing ಬಗ್ಗೆ ಅಲ್ಲಿ ಬಹಳ ಚರ್ಚೆ ನಡೆಯುತ್ತಿದೆ ನೀವು ಬಜೆಟ್‌ನಲ್ಲಿ 700 ಕೋಟಿ ರೂಪಾಯಿ ಭೂಮಿ ಮಾರಾಟದಿಂದ ಬರುತ್ತದೆ ಎಂದು ಹೇಳುತ್ತಿದ್ದೀರಿ. ಅದು ಮಾರಾಟ ಆದಾಗ ಬರುವಂಥದ್ದು. ಈ ಬಜೆಟ್‌ನಲ್ಲಿ ಅವರು receipts ಗೆ 700 ಕೋಟಿ ರೂಪಾಯಿಗಳನ್ನು ಸೇರಿಸಿಕೊಂಡಿದ್ದಾರೆ. ಈ receipt ಬಂದಾಗ ನಿಮ್ಮ ಈ ಒಂದು ವ್ಯವಸ್ಥೆ ಆಗುವಂಥಾದ್ದು. ಇದು ಬರುತ್ತದೆ ಎಂದು ಏನು ಗ್ಯಾರಂಟಿ? ನೀವು ಜಾಗವನ್ನು acquire ಮಾಡಿಕೊಳ್ಳುತ್ತೀರಿ, auction ಮಾಡುತ್ತೀರಿ, ಅವನು court ಗೆ ಹೋಗಿ stay ತೆಗೆದುಕೊಂಡು ಬಂದರೆ, ಇವರು ಅಷ್ಟು ಸುಲಭದಲ್ಲಿ ಬಿಟ್ಟು ಕೊಡುವಂತಹ ಕುಳಗಳಲ್ಲ. ಎಲ್ಲ powerful ವ್ಯಕ್ತಿಗಳೇ ಇದರಲ್ಲಿ ಇರುವುದು. ಪಾಪದವನು ಬಡವ ಯಾರೂ ಇದರಲ್ಲಿ ಕೈ ಹಾಕಲಿಲ್ಲ. ಅದರಲ್ಲಿ ಎಲ್ಲೆಲ್ಲಿ ಕಾಣದ ಕೈಗಳು ಕೆಲಸ ಮಾಡುತ್ತಿವೆ ಎಂದು ನಮಗೆ ಗೊತ್ತಿದೆ. ಆ ಕಾಣದ ಕೈಗಳು ಕೆಲಸ ಮಾಡುವಾಗ ಅಧಿಕಾರದಲ್ಲಿದ್ದವರು, ಇಲ್ಲದವರು ಎಲ್ಲರೂ ಇದರಲ್ಲಿ ಇದ್ದಾರೆ. ಆದ್ದರಿಂದ ನಿಮಗೆ ಮಾಡಲಿಕ್ಕಾಗುವುದಿಲ್ಲ. ತಾವು ಒಂದು ದಿವಸ ಬ್ರಹ್ಮಾವರದಲ್ಲಿ ಭಾಷಣ ಮಾಡುವಂತಹ ಸಂದರ್ಭದಲ್ಲಿ ಹೇಳಿದಿರಿ.

ಇದರಲ್ಲಿ ಯಾರ್ಯಾರಿದ್ದಾರೆ, ಯಾರಿದ್ದರೂ ಬಿಡುವುದಿಲ್ಲವೆಂದು. ಆದರೆ ಇಂತಹ ವ್ಯಕ್ತಿಗಳ ಕೈ ಕಟ್ಟುವುದು ಬಹಳ ಕಷ್ಟದ ಕೆಲಸ. ಒಂದು ವೇಳೆ ಈ 700 ಕೋಟಿ ರೂಪಾಯಿಗಳು ಬರದೇ ಇದ್ದಾಗ, ನಿಮ್ಮ ಹಣಕಾಸಿನ ವ್ಯವಸ್ಥೆ ಏನಾಗುತ್ತದೆ? ಪಟ್ಟಣ ಪ್ರದೇಶದ ಸುತ್ತ ಮುತ್ತ ಇದ್ದ ಭೂಮಿ ಕಬಳಿಸುವುದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿ, ಗ್ರಾಮೀಣ ಪ್ರದೇಶದ ರೈತರಿಗೂ ಭೂಮಿ ಮಾರುವುದಕ್ಕೆ ಸಮಸ್ಯೆ ಆಗಿದೆ. ನಮ್ಮಲ್ಲೆಲ್ಲಾ ಭೂಮಿಯನ್ನೇ ಮಾರಲಿಕ್ಕಾಗುತ್ತಿಲ್ಲ. ಯಾರು ಬಡವ ಅವನ ಮಗಳ ಮದುವೆ ಮಾಡಬೇಕೆಂದು ಹೇಳುತ್ತಿದ್ದಾನೆ, ಅವನಿಗೆ ಭೂಮಿ ಮಾರಲಿಕ್ಕೆ ಸಾಧ್ಯವಾಗುತ್ತಿಲ್ಲ. ಅದರ ಬಗ್ಗೆ ನೀವು clarification ಕೊಡಬೇಕಾಗುತ್ತದೆ. ಏಕೆಂದರೆ Deputy Commissioner ಏನು ತೀರ್ಮಾನ ತೆಗೆದುಕೊಂಡಿದ್ದಾರೆ, ಸರ್ಕಾರ ಏನೊಂದು ಆದೇಶವನ್ನು ಕಳುಹಿಸಿದೆ, ಎಲ್ಲಾ ಭಾಗಗಳಿಗೂ ಇದು ಅನ್ವಯವಾಗುತ್ತದೆ ಎಂದು ಹೇಳುತ್ತಿದ್ದಾರೆ. ಇದು ಎಲ್ಲಾ ಭಾಗಗಳಿಗೂ ಅನ್ವಯವಾಗಬಾರದು. ನಮ್ಮಲ್ಲಿ ಎಲ್ಲ fragmented lands ಇರುವಂಥದ್ದು. Fragment ಮಾಡಲಿಕ್ಕೆ ಅವಕಾಶವಿಲ್ಲವೆಂದು ಒಂದು ಆದೇಶ ಹೊರಡಿಸಿದ್ದಾರೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಮೊದಲು Madras Government Fragmentation Act ನಿಂದ exemption ಇತ್ತು. ಇಲ್ಲಿ ಸಮಸ್ಯೆ ಆಗಿ ಹೋಗಿದೆ. ಅದರ ಬಗ್ಗೆ ಸ್ವಲ್ಪ clarification ಕೊಡಬೇಕು. ಏಕೆಂದರೆ ನಮ್ಮಲ್ಲಿ ಎಲ್ಲರೂ ಸಮಸ್ಯೆಗೆ ಈಡಾಗಿದ್ದಾರೆ. ಅದನ್ನು ಪರಿಹಾರ ಮಾಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಹೇಳುತ್ತೇನೆ. ನಮ್ಮಲ್ಲಿ ಅಧಿಕಾರಿಗಳು ಸ್ವಲ್ಪ practical ಆಗಿ ಇರಬೇಕಾಗುತ್ತದೆ. ಬೆಳಿಗ್ಗೆ ಮಾನ್ಯ ಧರ್ಮಸಿಂಗ್‌ರವರು ಹೇಳಿದರು. ಹಿಂದೆ ಭೂಮಿ ಕೊಟ್ಟು ಅವರು ಮನೆಗಳನ್ನು ಕಟ್ಟಿದ್ದಾರೆ. ಸರ್ಕಾರ grant ಮಾಡಿದ land ನಲ್ಲಿ ಅವರು ಮನೆಗಳನ್ನು ಕಟ್ಟಿದ್ದರೆ, ನೇರವಾಗಿ ಬಂದು ಮನೆಗಳನ್ನು ಒಡೆಯುವಂಥದ್ದು, ಇದಕ್ಕೆ "ತೊಘಲಕ್ ದರ್ಬಾರ್" ಎಂದೇ ಹೇಳಬೇಕು. ಬೇರೆ ಶಬ್ದವನ್ನೇ ಉಪಯೋಗ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಅದೇ ರೀತಿಯಲ್ಲಿ ಇವತ್ತು ಬೆಳಿಗ್ಗೆ ನನ್ನ ಕ್ಷೇತ್ರದಲ್ಲಿ ನಡೆದಂತಹ ಘಟನೆ, ನಾನು ಹೇಳಿದೆ. ನಾವೇನು ಅಮೇರಿಕ ಇಂಗ್ಲೆಂಡ್ ಆಗಲಿಲ್ಲ. ರೋಡ್ ಮಾರ್ಜಿನ್‌ನಲ್ಲಿರುವ

ಪೆಟ್ಟಿಗೆ ಅಂಗಡಿಗಳನ್ನು ತೆಗೆಸಬೇಕಾದರೆ ನೋಟಿಸನ್ನು ಕೊಡಿ. ಅಥವಾ ಎಲ್ಲಾ ಭಾಗಗಳಲ್ಲಿ ಏನನ್ನು ಮಾಡುತ್ತೀರಿ, ಅದನ್ನು ಮಾಡಬೇಕು. ಇದಕ್ಕೆ ಪ್ರತ್ಯೇಕವಾದ ಕಾನೂನು ಇಲ್ಲ. ಒಂದು ಜಿಲ್ಲೆಯ ಒಂದು ಭಾಗದಲ್ಲಿ ಏನು ನಡೆಯುತ್ತದೆ, ಅದನ್ನೇ ಇಡೀ ಜಿಲ್ಲೆಯಲ್ಲಿ ನಡೆಯುವ ಹಾಗೆ ಮಾಡಬೇಕು. Backward Class ಬಗ್ಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ನಮ್ಮ ಭಾಗದ ಕುಡುಬಿ ಜನಾಂಗದವರನ್ನು ಅನೇಕ ವರ್ಷಗಳಿಂದ ಹಿಂದುಳಿದ ವರ್ಗಕ್ಕೆ ಸೇರಿಸಿದ್ದೀರಿ. ಅವರು ಪರಿಶಿಷ್ಟ ಪಂಗಡಕ್ಕೆ ಸೇರಬೇಕಿತ್ತು. ನೀವು Commission ಮಾಡಬೇಕೆಂದು ಹೇಳುತ್ತಿದ್ದೀರಿ. ವರ್ಷಗಳು ಕಳೆದರೂ ಅದನ್ನು ಮಾಡಲೇ ಇಲ್ಲ. ಕೇಂದ್ರಕ್ಕೆ ಪಟ್ಟಿಯನ್ನು ಕಳುಹಿಸಲಿಕ್ಕೆ ವ್ಯವಸ್ಥೆಯಾಗಲಿಲ್ಲ. ಕುಡುಬಿ ಜನಾಂಗದವರ ಪರಿಸ್ಥಿತಿ ಹೇಳಲಿಕ್ಕೆ ಸಾಧ್ಯವಿಲ್ಲ. ಮಾನ್ಯ ಜಯಕುಮಾರ್‌ರವರೇ, ನೀವು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದಾಗ ಎಲ್ಲಾದರೂ ಹೋಗಿದ್ದೀರಾ? ಇವತ್ತಿಗೂ ಕೂಡ ಒಂದೊಂದು ಮನೆಯಲ್ಲಿ 100–100 ಜನ ವಾಸ ಮಾಡುತ್ತಾರೆ. ಅವರನ್ನು ಪರಿಶಿಷ್ಟ ಜನಾಂಗಕ್ಕೆ ಸೇರಿಸಬೇಕೆಂದು Commission report ಕೇಂದ್ರಕ್ಕೆ ಹೋಗಬೇಕಾದರೆ, ಯಾವ ಸರ್ಕಾರಗಳು ಈ Commission ಗಳನ್ನೇ appoint ಮಾಡುತ್ತಿಲ್ಲ. ಬರೀ ಬಜೆಟ್ ಭಾಷಣದಲ್ಲಿ ಅವರ ಬಗ್ಗೆ ಮಾತನಾಡುವುದು ಬಿಟ್ಟರೆ ಏನೂ ಮಾಡಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಹೆಸರಿಗೆ permanent Backward Classes Commission ಎಂದು ಇದೆ. ಇದು permanent Vacant Commission ಆಗಿದೆ. ಈ ರಾಜ್ಯಕ್ಕೆ ಏನು ದೌರ್ಭಾಗ್ಯ ಬಂದಿದೆಯೋ ಗೊತ್ತಿಲ್ಲ. Since one and half years, Backward Classes Commission appoint ಮಾಡುವುದಕ್ಕಾಗುತ್ತಿಲ್ಲ. It is a permanent Commission.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಆ ವರದಿ cabinet ಗೆ ಬಂದು cabinet ನಿಂದ ಕೇಂದ್ರಕ್ಕೆ ಹೋಗಬೇಕಾಗಿದೆ. ಏಕೆಂದರೆ ಪರಿಶಿಷ್ಟ ಪಂಗಡಕ್ಕೆ ಸೇರಿಸಲಿಕ್ಕೆ ರಾಜ್ಯ ಸರ್ಕಾರದಿಂದ ಆಗುವುದಿಲ್ಲ. ಕೇಂದ್ರ ಸರ್ಕಾರಕ್ಕೆ ಹೋಗಬೇಕು. ಇವರ ಸಮಸ್ಯೆಯನ್ನು ಹೇಳಿದರೆ ಅರ್ಥವನ್ನೇ ಮಾಡಿಕೊಳ್ಳದ ಸರ್ಕಾರಕ್ಕೆ ಏನು ಮಾಡಲಿಕ್ಕಾಗುತ್ತದೆ?

ಶ್ರೀ ಗೋಪಾಲಕೃಷ್ಣ ಬೇಳೂರು :- ಕುಡುಬಿ ಜನಾಂಗದ ಬಗ್ಗೆ ಬಹಳ ತೊಂದರೆಯಾಗಿದೆ. ದಯವಿಟ್ಟು ಅದರ ಬಗ್ಗೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಯಪ್ರಕಾಶ್ ಹೆಗ್ಡೆ ಕೆ :- ಆದರ್ಶವಿವಾಹ ಎಂದರೆ ನಾವು ಚರ್ಚೆ ಮಾಡುತ್ತಿದ್ದೇವೆ. ನನ್ನ ಪ್ರಕಾರ ಆದರ್ಶ ವಿವಾಹ ಎಂದರೆ ಡೌರಿ ಯಾರು ತೆಗೆದುಕೊಳ್ಳುವುದಿಲ್ಲವೋ ಮದುವೆ ಬಹಳ simple ಆಗಿ ಮಾಡುತ್ತಾರೆ, ಅದನ್ನು ಆದರ್ಶ ವಿವಾಹ ಎಂದು ಪರಿಗಣಿಸಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :- ಅವರು ಬಜೆಟ್ ಭಾಷಣದಲ್ಲಿ minimum 25 ಜೊತೆ ಒಂದು ಕಡೆ ಮದುವೆ ಆದರೆ ಅದು ಆದರ್ಶ ವಿವಾಹ.

ಶ್ರೀ ಜಯಪ್ರಕಾಶ್ ಹೆಗ್ಡೆ ಕೆ :- ಅದು ಮಾತ್ರವಲ್ಲ. Mass marriage ನ್ನು ಬೇರೆಯವರು conduct ಮಾಡುತ್ತಾರೆ. ಈ ಪರಿಸ್ಥಿತಿಯಲ್ಲಿ ಎಲ್ಲಿ ವರದಕ್ಷಿಣೆ ತೆಗೆದುಕೊಂಡು ಮದುವೆ ಮಾಡುತ್ತಾರೆ, ಅದು ತೆಗೆದುಕೊಳ್ಳದೇ ಇರುವವರಿಗೆ ಆದರ್ಶ ಎಂದು ಹೇಳುವುದು ಬೇಡವಾ? ಮಾನ್ಯ ಉಪಾಧ್ಯಕ್ಷರೆ, ಈ ಹೊಸ ಮೆಡಿಕಲ್ ಕಾಲೇಜ್‌ಗಳ ಬಗ್ಗೆ ಪ್ರತಿ ವರ್ಷ ಬಜೆಟ್‌ನಲ್ಲಿ ಕೇಳುತ್ತಿದ್ದೇವೆ. ಇದ್ದ ಮೆಡಿಕಲ್ ಕಾಲೇಜ್‌ಗಳ ವ್ಯವಸ್ಥೆಯನ್ನೇ ಸರಿ ಮಾಡಿಕೊಂಡಿಲ್ಲ. ಸ್ಟಾಫ್ ಪ್ಯಾಟ್ರನ್ ಸರಿ ಇಲ್ಲ, ನರ್ಸಸ್ ಇಲ್ಲ, ಫೆಸಿಲಿಟೀಸ್ ಇಲ್ಲ, ಅದಕ್ಕೆ ಬೇಕಾದ ವ್ಯವಸ್ಥೆ ಮಾಡಿಕೊಂಡು ಸೀಟ್ಸ್ ಜಾಸ್ತಿ ಮಾಡಿಕೊಳ್ಳುವುದಕ್ಕೆ ಬೇಕಾದ ವ್ಯವಸ್ಥೆ ಮಾಡಬೇಕಾಗಿತ್ತು. ಅದನ್ನು ಮಾಡದೇ ಕೇವಲ ಹೊಸ ಮೆಡಿಕಲ್ ಕಾಲೇಜ್‌ಗಳ ಬಗ್ಗೆಯೇ ಇವರು ಹೇಳುತ್ತಿರುವುದನ್ನು ಕೇಳುತ್ತಿದ್ದೇವೆ. ನಾನು ಮೊನ್ನೆ ವೈದ್ಯಕೀಯ ಶಿಕ್ಷಣ ಸಚಿವರಿಗೆ ಒಂದು ಪ್ರಶ್ನೆಯನ್ನೆ ಕೇಳಿದ್ದೆ. ಯಾವ ಯಾವ ಕಾಲೇಜ್‌ಗಳಿಗೆ ಸೀಟ್ ಮ್ಯಾಟ್ರಿಕ್ಸ್‌ನ್ನು ಕೊಡದೆ ಅವರೇ ಸೀಟ್‌ನ್ನು ಹಂಚಿಕೊಂಡಿದ್ದಾರೆ ಎಂದು ಕೇಳಿದ್ದಕ್ಕೆ ಯಾವುದೂ ಇಲ್ಲವೆಂದು ಹೇಳಿದ್ದಾರೆ. ಆದರೆ ಎನೋಪ್ಯೇಯ "YENOPEAYA". ಮೆಡಿಕಲ್ ಕಾಲೇಜ್, ಮಂಗಳೂರು ಇದಕ್ಕೆ ಸುಪ್ರೀಂ ಕೋರ್ಟ್ ಆದೇಶ ಇದ್ದದ್ದರಿಂದ ನಾವು ಸೀಟ್ ಮ್ಯಾಟ್ರಿಕ್ಸ್ ಕೊಡುವುದಕ್ಕೆ ಸಂಬಂಧಪಟ್ಟಂತೆ ಅದನ್ನು ಮೊನ್ನೆ ಆ ಮೆಡಿಕಲ್ ಕಾಲೇಜ್‌ನವರ ಸಂಘದವರನ್ನು ಕರೆದು ಚರ್ಚೆಯನ್ನು ಮಾಡಿದಾಗ ನಮ್ಮಿಂದ ತಪ್ಪಾಗಿದೆಯೆಂದು ಹೇಳಿದ್ದಾರೆ. ಒಂದು ಮೆಡಿಕಲ್ ಕಾಲೇಜ್‌ನವರಿಗೆ ಹೋದ

ವರ್ಷ ಸೀಟ್ ಮ್ಯಾಟ್ರಿಕ್ಸ್‌ನ್ನೇ ಕೊಡಲಿಲ್ಲ. ಅದು ಏಕೆ ಎಂದು ತನಿಖೆಯಾಗಬೇಕಾಗುತ್ತದೆ. ಕಡತವನ್ನು ತರಿಸಿಟ್ಟುಕೊಂಡು ಇಲ್ಲಿ ಅವರಿಗೆ ಮೆಡಿಕಲ್ ಕಾಲೇಜ್‌ಗೆ ಅಡ್ಮಿಶನ್ಸ್‌ನ್ನು ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟದ್ದು. ಇದರ ಬಗ್ಗೆ ತನಿಖೆಯನ್ನು ಮಾಡಿಸಬೇಕು. ಪ್ರತಿ ಸಲ ಇವರು ಟ್ರಾನ್ಸ್‌ಪರೆಂಟ್ ಆಗಿ ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ಇದು ಟ್ರಾನ್ಸ್‌ಪರೆಂಟ್ ಆಗಿ ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ಇದು ಟ್ರಾನ್ಸ್‌ಪರೆಂಟ್ ಆಗಿ ಆಗಿಲ್ಲ. ಇದಕ್ಕೆ ಯಾರು ಕಾರಣರಾಗುತ್ತಾರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಅದರ ಬಗ್ಗೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಬಂದಾಗ ಪುನಃ ನಾನು ಈ ಪ್ರಶ್ನೆಯನ್ನು ಎತ್ತಿದೆ. ಏಕೆಂದರೆ ಅದರಲ್ಲಿ 100 ಸೀಟ್‌ಗಳನ್ನು ಮಾರಿಕೊಳ್ಳುವುದಕ್ಕೆ ಬಿಟ್ಟಿದ್ದಾರೆ ಎಂದು ಕಾಣುತ್ತದೆ. ಅದರ ಬಗ್ಗೆ ತನಿಖೆಯಾಗಬೇಕಾಗುತ್ತದೆ. ಇನ್ನು ಪವರ್ ಸೆಕ್ಟರ್ ಬಗ್ಗೆ ಹೇಳಬೇಕೆಂದರೆ ನಮ್ಮಲ್ಲಿ 4,500 ಮೆಗಾವ್ಯಾಟ್ ಟೋಟಲ್ ಉತ್ಪಾದನೆ. ಎಷ್ಟು ವರ್ಷದಿಂದ ಇಷ್ಟೇ ಪವರ್ ಉತ್ಪಾದನೆಯನ್ನು ಮಾಡುತ್ತಿದ್ದೀರಿ ಎಂಬ ಬಗ್ಗೆ ಲೆಕ್ಕ ಹಾಕಿದ್ದೀರಾ? ನಮ್ಮಷ್ಟೇ ಉತ್ಪಾದನೆ ಮಾಡುತ್ತಿದ್ದ ತಮಿಳುನಾಡಿನವರು, ಗುಜರಾತ್‌ನವರು, 15 ಸಾವಿರ ಮೆಗಾವ್ಯಾಟ್‌ಗೆ ಹೋದರು. ನೀವು ಕೇವಲ ಇತ್ತೀಚೆಗೆ ಗುಂಡ್ಯಾದ ಹೈಡಲ್ ಪ್ರಾಜೆಕ್ಟ್ ಬಗ್ಗೆ ಒಂದನ್ನು ಹೇಳಿದ್ದೀರಿ. ಅದರ ಬಗ್ಗೆಯೂ ಅಲ್ಲಿ ವಿರೋಧ ಬರುತ್ತದೆ. ನಮ್ಮಲ್ಲಿ ವಿರೋಧ ಬಂದದ್ದನ್ನೆಲ್ಲಾ ನಿಲ್ಲಿಸಿಕೊಂಡು ಇವೊತ್ತಿಗೆ ಪವರ್ ಸೆಕ್ಟರ್‌ನಲ್ಲಿ ಪವರ್ ಪೊಸಿಶನ್ನು ಇಂಪ್ರೂವ್ ಮಾಡುವುದಕ್ಕೆ ಸಾಧ್ಯವಾಗದಾಗಿದೆ. ಹೀಗಿರುವಾಗ ಬೇರೆ ಕಡೆಯಿಂದ ಪವರ್ ಪರ್ಚೇಸ್ ಮಾಡುವುದಕ್ಕೂ ಕೂಡ ನೀವು ದುಡ್ಡನ್ನು ಇಟ್ಟಿಲ್ಲ. ದುಡ್ಡನ್ನು ಇಟ್ಟಿದ್ದರೂ ಪವರ್ ಸಿಗುತ್ತಿತ್ತೋ ಅಥವಾ ಇಲ್ಲವೋ ಅದು ಬೇರೆ ವಿಷಯ. ವಿದ್ಯುತ್‌ಗಾಗಿ ನೀವು ಏನು ವ್ಯವಸ್ಥೆಯನ್ನು ಮಾಡಿದ್ದೀರಿ? ಗ್ರಾಮೀಣ ಪ್ರದೇಶದಲ್ಲಿ 6 ಗಂಟೆ ಶಟ್‌ಡೌನ್ ಮಾಡುತ್ತೇವೆ, ಪಟ್ಟಣ ಪ್ರದೇಶಗಳಲ್ಲಿ ಮಾಡುವುದಿಲ್ಲವೆನ್ನುವ ಹೇಳಿಕೆಯನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಆದರೆ ದಿನನಿತ್ಯ ಕರೆಂಟ್ ಹೋಗುತ್ತಿದೆ, ಬೆಂಗಳೂರಿನಲ್ಲಿಯೂ ಹೋಗುತ್ತಿದೆ, ಗ್ರಾಮೀಣ ಪ್ರದೇಶದಲ್ಲಿ ಆರು ಗಂಟೆಗಳ ಕಾಲ ಎಂದು ಹೇಳಿರುವ ಕಡೆ ಎಂಟು

ಗಂಟೆಗಳ ಕಾಲ ಕರೆಂಟ್ ಹೋಗುತ್ತಿದೆ. ಇದರ ಬಗ್ಗೆ ಕೇಳುವವರೇ ಇಲ್ಲ. ಆದುದರಿಂದ ನೀವು ಪವರ್ ಸೆಕ್ಟರ್ ಇಂಪ್ರೂವ್‌ಮೆಂಟ್‌ಗೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲವೆನ್ನುವ ಬಗ್ಗೆ ಹೆಚ್ಚು ಮಾಹಿತಿಯನ್ನು ಕೊಡುತ್ತೇನೆ. ದಯವಿಟ್ಟು ಇದರ ಬಗ್ಗೆ ಆಲೋಚನೆಯನ್ನು ಮಾಡಬೇಕು. ನಾನು ಇನ್ನೊಂದು ಪ್ರಶ್ನೆಯನ್ನು ಈಗ ಕೇಳಬಯಸುತ್ತೇನೆ. ಒಟ್ಟಾರೆ ಇದುವರೆಗೆ ಕ್ರೆಡೆಲ್ ಮುಖೇನ ಮಿನಿ ಹೈಡಲ್ ಪ್ರಾಜೆಕ್ಟ್‌ಗೆ ಎಷ್ಟಕ್ಕೆ ಪರ್ಮಿಶನ್‌ನ್ನು ತೆಗೆದುಕೊಂಡಿದ್ದಾರೆ, ಎಷ್ಟು ಜನ ಇಂಪ್ಲಿಮೆಂಟ್ ಮಾಡಿದ್ದಾರೆ, ಎಷ್ಟು ಜನ ಅದರಲ್ಲಿ ಟ್ರೇಡಿಂಗ್‌ನ್ನು ಮಾಡಿದ್ದಾರೆ ಎನ್ನುವ ಬಗ್ಗೆ ನನಗೆ ಮಾಹಿತಿಯನ್ನು ತಾವು ಕೊಡಬೇಕಾಗುತ್ತದೆ. ಇದರಲ್ಲಿ ಒಬ್ಬ ಕ್ಲಿಯರೆನ್ಸ್ ತೆಗೆದುಕೊಳ್ಳುವುದು, ಅವನು ಇನ್ನೊಬ್ಬನಿಗೆ ಮಾರಾಟ ಮಾಡುವುದು, ಇದೇ ಒಂದು ದಂಧೆಯಾಗಿದೆ. ಇದರ ಬಗ್ಗೆ ಮಾಹಿತಿಯನ್ನು ಕೊಡಿ. ಯಾರು ಅದಕ್ಕೆ ಜವಾಬ್ದಾರರಾಗಿದ್ದಾರೆ, ಯಾರು ಎಷ್ಟು ದೊಡ್ಡ ವ್ಯಕ್ತಿಯಾಗಿದ್ದರೂ ಕೂಡ ಇದರ ಬಗ್ಗೆ ಕ್ರಮ ತೆಗೆದುಕೊಂಡು ಕ್ಯಾನ್ಸಲ್ ಮಾಡಿ. ಸಪೋಸ್ ಅವನು ಪ್ರಾಜೆಕ್ಟ್ ಮಾಡದೇ ಬೇರೆಯವನಿಗೆ ಮಾರಾಟ ಮಾಡಿದ್ದರೆ ಅವನದ್ದನ್ನು ಕ್ಯಾನ್ಸಲ್ ಮಾಡಿ ಪುನಃ ಟೆಂಡರ್ ಕರೆದು ಬೇರೆಯವರಿಗೆ ಕೊಡಿ. ಯಾರು ಮಾಡುತ್ತಾರೆ ಅವರಿಗೆ ಕೊಡಿ. ವಿಂಡ್ ಪವರ್, ಕ್ರೆಡೆಲ್ ಬಗ್ಗೆ ಸರ್ಕಾರ ತಲೆಯನ್ನು ಕೆಡಿಸಿಕೊಂಡಂತೆ ಕಾಣುವುದಿಲ್ಲ. ಪವರ್ ಇಲ್ಲ, ಇಂಡಸ್ಟ್ರಿಯಲ್ ಗ್ರೋತ್ ಬಗ್ಗೆ ಇವರು 1,01,280.23 ಕೋಟಿಯಷ್ಟು ಇನ್‌ವೆಸ್ಟ್‌ಮೆಂಟ್ ಎಂದು ಹೇಳುತ್ತಾರೆ. ಹಿಂದೆ ದೇಶಪಾಂಡೆಯವರು ಇಂಡಸ್ಟ್ರಿ ಮಿನಿಸ್ಟರ್ ಆಗಿದ್ದಾಗ ಇದೇ ರೀತಿ ಹೇಳಿಕೆಯನ್ನು ಕೊಡುತ್ತಾ ಬಂದರು. 36 ಸಾವಿರ ಎಂದು ಅವರ ಕಾಲದಲ್ಲಿ ಹೇಳಿದರು. ಮಾನ್ಯ ಸಿಂಧ್ಯಾರವರು 46 ಸಾವಿರ ಎಂದು ಹೇಳಿದರು. ಈಗ 1,01,280.23 ಕೋಟಿ ಎಂದು ಹೇಳಿದ್ದಾರೆ. ಇದರಲ್ಲಿ ಎಷ್ಟು ಇಂಡಸ್ಟ್ರೀಸ್ ಬಂದಿದೆ ಎಂಬ ಬಗ್ಗೆ ನಮಗೆ ಮಾಹಿತಿ ಬೇಕಾಗುತ್ತದೆ. ಇದರ ಜೊತೆ ಎಷ್ಟು ಉದ್ಯೋಗ ಸೃಷ್ಟಿಯಾಗಿದೆ ಎಂಬ ಬಗ್ಗೆ ಕೂಡ ಹೇಳಬೇಕು. ನಾನು ಮಾನ್ಯ ಶ್ರೀರಾಮರೆಡ್ಡಿಯವರು ಮಾತನಾಡುವಾಗ ಗಮನಿಸುತ್ತಿದ್ದೆ. ನಮ್ಮಲ್ಲಿ ಎಷ್ಟು ಜನ ಇಂಜಿನಿಯರ್‌ಗಳು ನಿರುದ್ಯೋಗಿಗಳಿದ್ದಾರೆ, ಎಷ್ಟು ಜನ ಅನ್-ಸ್ಕಿಲ್ಡ್ ಲೇಬರ್ಸ್ ಇದ್ದಾರೆ. ಈಗ ಐ.ಟಿ. ಇಂಡಸ್ಟ್ರಿ ಮತ್ತು ಕಾಲ್ ಸೆಂಟರ್‌ನಲ್ಲಿ ಒಟ್ಟು

ಎಂಪ್ಲಾಯೀಸ್ ಎಷ್ಟಿದ್ದಾರೆ ಮತ್ತು ಅವರ ವರ್ಕಿಂಗ್ ಕಂಡೀಶನ್ ಏನು ಎಂಬ ಬಗ್ಗೆ ಕೂಡ ಚರ್ಚೆಯಾಗಬೇಕಾಗುತ್ತದೆ. ಏಕೆಂದರೆ ಅವರೇನು ಮಾಡುತ್ತಾರೆಂದರೆ ಎಂಟು ಗಂಟೆಗಳ ಕಾಲ ವರ್ಕಿಂಗ್ ಎಂದು ಹೇಳಿ ಒಂದು ಪ್ರಾಜೆಕ್ಟ್‌ನ್ನು ಕೊಟ್ಟು ಅದು ಮುಗಿಯುವವರೆಗೂ ರಾತ್ರಿಯಾದರೂ ಅದು ಆಗುವುದಿಲ್ಲ. ಇದು ಒಂದು ದುರಂತ. ಅದರ ಬಗ್ಗೆ ತನಿಖೆ ಮಾಡಿಸಬೇಕಾಗುತ್ತದೆ. ಇಲ್ಲದಿದ್ದರೆ ಈ ಐ.ಟಿ. ಇಂಡಸ್ಟ್ರೀಸ್‌ನಲ್ಲಿ ಮತ್ತು ಕಾಲ್ ಸೆಂಟರ್‌ಗಳಲ್ಲಿ ಕೆಲಸ ಮಾಡುವ ನಮ್ಮ ಮಕ್ಕಳ ಪರಿಸ್ಥಿತಿ ಚಿಂತಾಜನಕವಾಗುತ್ತದೆ. ಅವರು ಯಾವ ಸ್ಟ್ರೈಸ್‌ನಲ್ಲಿದ್ದಾರೆಂದು ಯಾರಿಗೂ ಗೊತ್ತಿಲ್ಲ. ಸಂಬಳ ಜಾಸ್ತಿ ಸಿಗುತ್ತಿದೆಯೆಂದು ಮಾತ್ರ ಕೆಲಸವನ್ನು ಮಾಡುತ್ತಿದ್ದಾರೆಯೇ ಹೊರತು ಆ ಸಂಬಳಕ್ಕೆ ಅವರು ಮಾಡುವ ಕೆಲಸ ವಿಪರೀತ ಜಾಸ್ತಿ. ಅಲ್ಲಿ ಅವರ ದೇಶದಲ್ಲಿ ಯಾರೂ ಇಷ್ಟು ಸಂಬಳಕ್ಕೆ ಕೆಲಸ ಮಾಡುವುದಿಲ್ಲವೆಂದು ಇಲ್ಲಿ ನಮ್ಮ ದೇಶದಲ್ಲಿರುವವರಿಂದ ಈ ಕೆಲಸವನ್ನು ಮಾಡಿಸುತ್ತಿದ್ದಾರೆ. ಅದಕ್ಕೆ ಸರಿಯಾಗಿ ಮೊನ್ನೆ ನಾವು ಚರ್ಚೆ ಮಾಡಿದ ಹಾಗೆ ಅವರಿಗೆ ಭೂಮಿಯನ್ನು ಕೊಟ್ಟಂಥದ್ದು ಎಷ್ಟು? ಈ ಬಗ್ಗೆ ಲ್ಯಾಂಡ್ ಆಡಿಟಿಂಗ್ ಆಗಬೇಕಾಗುತ್ತದೆ. ಲ್ಯಾಂಡ್ ಆಡಿಟಿಂಗ್ ಮಾಡಿ ಅದೇ ಜಾಗದಲ್ಲಿ ಅವರಿಗೆ ವಸತಿ ಸೌಲಭ್ಯವನ್ನು ಒದಗಿಸಿಕೊಡಬೇಕಾಗುತ್ತದೆ. ವಸತಿ ಯೋಜನೆಯನ್ನು ಮಾಡಿದಾಗ ಈ ಟ್ರಾಫಿಕ್ ಕಂಜೆಶನ್‌ನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಈ ಬಗ್ಗೆಯೇ ಮೊನ್ನೆ ನಾನು ಮತ್ತು ಮಾಧುಸ್ವಾಮಿಯವರು ಮಾತನಾಡಿದ್ದೆವು. ಇದರ ಬಗ್ಗೆ ನಾವು ಆಲೋಚನೆಯನ್ನು ಮಾಡದೇ ಕೇವಲ ಇಲ್ಲಿಗೆ ಬಂದಿರುವ ಅವರನ್ನು ಡೆವಲಪ್ ಮಾಡುವುದಕ್ಕೆ ಹೋಗಬಾರದು. ಅವರೂ ಅಭಿವೃದ್ಧಿಯಾಗಬೇಕು. ಅದರ ಜೊತೆ ಜೊತೆಯಲ್ಲಿಯೇ ನಮ್ಮ ರಾಜ್ಯ ಮತ್ತು ದೇಶ ಅಭಿವೃದ್ಧಿಯಾಗಬೇಕು ಮತ್ತು ನಮ್ಮಲ್ಲಿರುವ ನಿರುದ್ಯೋಗ ಸಮಸ್ಯೆ ಕೂಡ ಬಗೆಹರಿಯಬೇಕು. ರಮೇಶ್‌ಕುಮಾರ್‌ರವರು ಆಗಲೇ ಮಾತನಾಡಿದರು. ನಮ್ಮಲ್ಲಿರುವ ಅನ್-ಸ್ಕಿಲ್ಡ್ ಲೇಬರ್ ಪರಿಸ್ಥಿತಿ ಏನು ಎಂದು ಅವರು ಹೇಳಿದರು. ಅನ್-ಸ್ಕಿಲ್ಡ್ ಲೇಬರ್ ಪರಿಸ್ಥಿತಿ ಅಭಿವೃದ್ಧಿಯಾಗಬೇಕಾದರೆ ಬೇಸಿಕ್ ಇಂಡಸ್ಟೀಸ್‌ಗಳಾದ ಇಂಜಿನಿಯರಿಂಗ್ ಬರಬೇಕಾಗುತ್ತದೆ. ಈ ಇಂಜಿನಿಯರಿಂಗ್ ಇಂಡಸ್ಟ್ರೀಸ್ ಬರುತ್ತದೆಂದರೆ ಪರಿಸರವಾದಿಗಳ ವಿರೋಧವಾಗುತ್ತದೆ. ಇದನ್ನು ನೋಡಿಯೇ ನಮ್ಮಲ್ಲಿ ಇಂಡಸ್ಟ್ರೀಸ್‌ಗಳೇ ಬರುವುದಿಲ್ಲ. ಹೀಗಾಗಿ ಇದರಲ್ಲಿ ಇನ್‌ವೆಸ್ಟ್‌ಮೆಂಟೇ ಇಲ್ಲ. ನನ್ನ ಹತ್ತಿರ ಒಬ್ಬರು ನನ್ನ ಸಹೋದ್ಯೋಗಿ ಶಾಸಕ ಮಿತ್ರರು ಕೇಳಿದರು.

ಶ್ರೀ ಜೆ.ಸಿ. ಮಾಧುಸ್ವಾಮಿ :- ಒಂದು ನಿಮಿಷ ಮಾನ್ಯ ಯಡಿಯೂರಪ್ಪನವರು ಬೇರೆ ಎಲ್ಲವನ್ನೂ ಶಿವಮೊಗ್ಗಕ್ಕೆ ತೆಗೆದುಕೊಂಡು ಹೋಗುವುದನ್ನು ಬಿಟ್ಟು ಇಂಡಸ್ಟ್ರೀಸ್‌ಗಳನ್ನು ಶಿವಮೊಗ್ಗಕ್ಕೆ ತೆಗೆದುಕೊಂಡು ಹೋಗಿದ್ದರೆ ರಾಜ್ಯಕ್ಕೆ ಮತ್ತು ಜನರಿಗೆ ಬಹಳ ಒಳ್ಳೆಯದಾಗುತ್ತಿತ್ತು. ಏಕೆಂದರೆ ಪ್ರಪಂಚದ ಎಲ್ಲಾ ಇಂಡಸ್ಟ್ರೀಸ್‌ಗಳು ಎಸ್ಟಾಬ್ಲಿಶ್ ಆಗುವುದು ರಿವರ್ ಸೈಡ್‌ನಲ್ಲಿಯೇ. ಏಕೆಂದರೆ ಅವರಿಗೆ ವಾಟರ್ ಸಪ್ಲೈ ಚೆನ್ನಾಗಿರುತ್ತದೆ, ಪವರ್ ಸಪ್ಲೈ ಚೆನ್ನಾಗಿರುತ್ತದೆ. ಬೆಂಗಳೂರಿಗೆ ಇಂಡಸ್ಟ್ರೀಸ್ ತಂದು ನಮಗೆ ಇರಿಗೇಶನ್‌ಗೆ ಇರುವ ನೀರನ್ನೂ ಇಲ್ಲಿಗೇ ತರಬೇಕು, ಹಳ್ಳಿಯಲ್ಲಿರುವ ಕರೆಂಟನ್ನೂ ಇಲ್ಲಿಗೇ ತರಬೇಕು, ಹೊಲದಲ್ಲಿ ಮತ್ತು ಜಮೀನಿನಲ್ಲಿ ಹಳ್ಳಿಯಲ್ಲಿ ಕೆಲಸ ಮಾಡುವ ಕೂಲಿ ಜನರನ್ನೂ ಕೂಡ ಇಲ್ಲಿಗೆ ತರಬೇಕು. ಒಂದು ಇಂಡಸ್ಟ್ರಿಯನ್ನು ಬೆಂಗಳೂರಿನಲ್ಲಿ ಹಾಕಿ ಎನ್‌ಟೈರ್ ಸ್ಟೇಟ್‌ನ್ನು ಇವೊತ್ತು ಇಲ್ಲಿಗೆ ಮೈಗ್ರೇಟ್ ಮಾಡುತ್ತಿದ್ದೇವೆ. See, you must have a policy. ನೀವು ಆ ಇಂಡಸ್ಟ್ರೀಸ್‌ರವರನ್ನು ಆ ಕಡೆಗೆ ಕಳುಹಿಸಿ. ಶಿವಮೊಗ್ಗ ಜಿಲ್ಲೆಗೆ ಹೋಗಲಿ, ದಾವಣಗೆರೆಗೆ ಹೋಗಲಿ, ಬೆಳಗಾಂಗೆ ಹೋಗಲಿ, ಮತ್ತೊಂದು ಕಡೆಗೆ ಹೋಗಿ ಅವರು ಇಂಡಸ್ಟ್ರೀಸ್‌ಗಳನ್ನು ಮಾಡುತ್ತಿದ್ದರು. ಇವೊತ್ತು ನೀರು ಸಿಗುತ್ತದೆ, ಜನ ಸಿಗುತ್ತಾರೆ, ಲೋಕಲ್‌ನಲ್ಲಿಯೇ ಇರುವುದರಿಂದ ಈ ಟ್ರಾಫಿಕ್ ಕಂಜೆಶನ್ ತಪ್ಪುತ್ತದೆ. ಅದನ್ನು ಬಿಟ್ಟು ಬೆಂಗಳೂರನ್ನು ಮಾತ್ರ ಬೆಳೆಸಲಾಗುತ್ತಿದೆ. ಬೆಂಗಳೂರು ಬೆಳೆಯುವುದರಿಂದ ಕರ್ನಾಟಕಕ್ಕೆ ಆಗುವ ಅನುಕೂಲಗಳಿಗಿಂತ ಪಕ್ಕದ ರಾಜ್ಯಗಳಾದ ಆಂಧ್ರಕ್ಕೆ ಮತ್ತು ತಮಿಳುನಾಡಿಗೆ ಹೆಚ್ಚು ಅನುಕೂಲವಾಗುವುದು. ಎಲ್ಲಿಯವರೆವಿಗೂ ಇದನ್ನು ಬೆಳೆಸಿಕೊಂಡು ಹೋಗುತ್ತೀರಿ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ತಮಿಳುನಾಡಿಗೆ ಲಾಭ ಜಾಸ್ತಿಯಾಗಿ ಡೀಸೆಲ್ ಮೇಲೆ ಇಲ್ಲಿ ಟ್ಯಾಕ್ಸ್ ಜಾಸ್ತಿಯಾಗುತ್ತದೆ. ಏಕೆಂದರೆ ಇದನ್ನು ತಮಿಳುನಾಡಿನಿಂದ ತೆಗೆದುಕೊಂಡು ಬರುತ್ತಾರೆ. ಆಂಧ್ರ ಪ್ರದೇಶದಲ್ಲಿ ಚೀಪ್ ಇದೆ. ಎಲ್ಲಾ ಇಂಡಸ್ಟ್ರೀಸ್‌ಗಳು ನಮ್ಮಲ್ಲಿ ಪವರ್ ಇಲ್ಲದಿದ್ದರಿಂದ ಎಲ್ಲರೂ ಮೈಗ್ರೇಟ್ ಆಗುತ್ತಿದ್ದಾರೆ, ಈಗ ಬೇರೆ ಕಡೆಗೆ ಹೋಗುತ್ತಿದ್ದಾರೆ, ಆಂಧ್ರಪ್ರದೇಶಕ್ಕೆ, ತಮಿಳುನಾಡಿಗೆ ಹೋಗುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಈಗ ವೆಸ್ಟ್‌ಬೆಂಗಾಲ್‌ಗೂ ಕೂಡ ಹೋಗುವುದಕ್ಕೆ ಪ್ರಾರಂಭ ಮಾಡಿದ್ದಾರೆ. ವೆಸ್ಟ್ ಬೆಂಗಾಲ್‌ನಲ್ಲಿ ನಂದಿಗ್ರಾಮದ

ಬಗ್ಗೆ ಹೇಳುತ್ತಾರೆ. ಇಡೀ ವೆಸ್ಟ್ ಬೆಂಗಾಲ್‌ನಲ್ಲಿ ಎಷ್ಟು ಲ್ಯಾಂಡ್ ಅಕ್ವಿಸಿಶನ್‌ನ್ನು ಮಾಡಿದ್ದಾರೆ ಮತ್ತು ಕರ್ನಾಟಕದಲ್ಲಿ ಎಷ್ಟು ಲ್ಯಾಂಡ್ ಅಕ್ವಿಸಿಶನ್‌ನ್ನು ಮಾಡಿದ್ದಾರೆ ಎಂಬ ಬಗ್ಗೆ ಒಂದು ಲೆಕ್ಕವನ್ನು ತೆಗೆದರೆ, ಮಾನ್ಯ ಸದಸ್ಯರು ಯಾರೋ ಪ್ರಶ್ನೆಯನ್ನು ಕೇಳಿದ್ದಾರಲ್ಲ ಅವರು ಕೇಳಿರುವ ಪ್ರಶ್ನೆಗೆ ಮಾಹಿತಿ ಸಿಗುತ್ತದೆ. ನಮ್ಮಲ್ಲಿ ಲ್ಯಾಂಡ್ ಆಡಿಟಿಂಗ್ ಮಾಡದೇ ಲ್ಯಾಂಡ್ ಕೊಡುವುದು ಜಾಸ್ತಿಯಾಗಿದೆ. ಕೋ-ಜನರೇಶನ್ ಬಗ್ಗೆ ಕೂಡ ಮಾಹಿತಿಯನ್ನು ಕೊಡಬೇಕಾಗುತ್ತದೆ. ಎಷ್ಟು ಜನರು ಕೋ-ಜನರೇಶನ್ ಬಗ್ಗೆ ಕೂಡ ಮಾಹಿತಿಯನ್ನು ಕೊಡಬೇಕಾಗುತ್ತದೆ. ಎಷ್ಟು ಜನರು ಕೋ-ಜನರೇಶನ್‌ಗಾಗಿ ಪರ್ಮಿಶನ್‌ನ್ನು ತೆಗೆದುಕೊಂಡಿದ್ದಾರೆ ಇದರಲ್ಲಿ ಎಷ್ಟು ಜನರು ಕೋ-ಜನರೇಶನ್ ಮಾಡಿದ್ದಾರೆ ಎಂಬ ಬಗ್ಗೆ ಕೂಡ ಮಾಹಿತಿಯನ್ನು ಕೊಡಬೇಕು. ಇನ್ನು ಈ ಮೊಲಾಸೆಸ್ ಬಗ್ಗೆ ತಾವು ಬೆಳಿಗ್ಗೆ ಚರ್ಚೆಯನ್ನು ಮಾಡಿದಿರಿ. ಖಂಡಿತ ತಾವು ಹೇಳಿದ ಸಮಸ್ಯೆ ಉದ್ಭವವಾಗುತ್ತದೆ. ನಿಜವಾಗಿ ಎಥನಾಲ್‌ನ್ನು ಪ್ರೊಡ್ಯೂಸ್ ಮಾಡುವುದಕ್ಕೆ ಪ್ರಾರಂಭವನ್ನು ಮಾಡಿದರೆ ಈ ಎಲ್ಲಾ ಮೊಲಾಸೆಸ್‌ನ್ನು ಅದಕ್ಕೆ ಉಪಯೋಗ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈಗ ಡೀಸೆಲ್ ಜೊತೆ ಮಿಕ್ಸ್ ಮಾಡುವುದಕ್ಕೆ ಪರ್ಮಿಶನ್‌ನ್ನು ಕೊಟ್ಟಿದ್ದಾರೆಯಾದ ಕಾರಣ ಅದಕ್ಕೆ ಮಿಕ್ಸ್ ಮಾಡುವುದಕ್ಕೆ ಉಪಯೋಗವನ್ನು ಮಾಡುತ್ತಿದ್ದಾರೆ. ಆದರೆ ನಮ್ಮಲ್ಲಿ ವೋಸ್ಟ್‌ಲಿ ಎಕ್ಸ್‌ಪೋರ್ಟ್‌ಗೆ ಪರ್ಮಿಶನ್ ಕೊಡುತ್ತಾರೆಯೆ? ಎಕ್ಸ್‌ಪೋರ್ಟ್‌ಗೆ ಪರ್ಮಿಶನ್‌ನ್ನು ಕೊಟ್ಟು ಇಲ್ಲಿಯ ಪರಿಸ್ಥಿತಿಯನ್ನು ಚಿಂತಾಜನಕ ಮಾಡುವುದಕ್ಕೆ ಹೊರಟಿದ್ದಾರೆ. ಈ ಬಾರಿಯೂ ಕೂಡ ಎಕ್ಸ್‌ಪೋರ್ಟ್‌ಗೆ ಪರ್ಮಿಶನ್ ಕೊಟ್ಟಿದ್ದಾರೆ. ಅದನ್ನು ಮಾಡಿದರೆ ಪುನಃ ಇಲ್ಲಿ ರೇಟ್‌ಗಳೆಲ್ಲಾ ಜಾಸ್ತಿಯಾಗುವುದಕ್ಕೆ ಪ್ರಾರಂಭವಾಗುತ್ತದೆ. ಸಕ್ಕರೆ ಕಾರ್ಖಾನೆಗಳಿಗೆ ಅದರಿಂದ ಲಾಭವಾಗುತ್ತದೆ. ಅದರಿಂದ ಅವರಿಗೆ ತೊಂದರೆ ಇಲ್ಲ. ಆದರೆ ಅದರ ಟ್ರೇಡರ್ಸ್‌ಗೆ ಮಾತ್ರ ಅದರಿಂದ ಲಾಭವಾಗುತ್ತಿದೆ. ಆ ಬಗ್ಗೆ ಸರ್ಕಾರ ಗಮನ ಹರಿಸಬೇಕಾಗುತ್ತದೆ. ದಯವಿಟ್ಟು ಇದರ ಬಗ್ಗೆ ಗಮನ ಹರಿಸಬೇಕೆಂದ ಹೇಳುತ್ತೇನೆ. ಇನ್ನು power project allocation of 2102 crores for subsidy and pension and gratuity ಅವರಿಗೆ. ಇವರು ಕೆ.ಇ.ಆರ್.ಸಿ. ಯವರು ಹೇಳಿದ್ದಕ್ಕೆ ಕೆಲವಕ್ಕೆ ದುಡ್ಡನ್ನು ಕೊಟ್ಟಿದ್ದಾರೆ. ಏಕೆಂದರೆ

ಇವರದು ಬಾಕಿ ಇದೆ. ಕೆ.ಪಿ.ಟಿ.ಸಿ.ಎಲ್.ಗೆ ಮತ್ತು ಕೆ.ಪಿ.ಸಿ.ಎಲ್.ಗೆ ಸರ್ಕಾರ ಬಾಕಿ ಇಟ್ಟುಕೊಂಡಿದ್ದಾರೆ. ಅದಕ್ಕೋಸ್ಕರ ದುಡ್ಡನ್ನು ಇವರು ಕೊಡುತ್ತಿದ್ದಾರೆ. ಹೆಚ್ಚಾಗಿ ಏನು ಕೊಟ್ಟಿಲ್ಲ. ಇನ್ನೂ ಸಾಲ ಬಾಕಿ ಇದೆ. ಅಲೊಕೇಶನ್ ಮಾಡುವಾಗ part of the arrears ನ್ನು ಮಾತ್ರ ಇಟ್ಟುಕೊಂಡಿದ್ದಾರೆ. ಅದು ಬಿಟ್ಟರೆ ಇಲ್ಲಿ ಒಂದು ಕಡೆಯಲ್ಲಿ ಇವರದ್ದು ಸಬ್ಸಿಡಿ ನೇರವಾಗಿ ಗ್ರಾಹಕರಿಗೆ ಸಿಕ್ಕಿತು. ಇನ್ನೊಂದು ಕಡೆಯಲ್ಲಿ ಇವರು ಸೋಶಿಯಲ್ ಸೆಕ್ಟರ್ಸ್‌ನಲ್ಲಿ ಏನು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಮತ್ತು ಬೇರೆ ಬೇರೆ ಡಿಪಾರ್ಟ್‌ಮೆಂಟ್‌ನಲ್ಲಿ ಸಬ್ಸಿಡಿ ಕೊಡುತ್ತಿದ್ದಾರೆ, ಅದು ರೈತರಿಗೆ ಮುಟ್ಟುವಾಗ ಅಧಿಕಾರಿಗಳಿಗೆ ಎಷ್ಟೆಷ್ಟು ಸಬ್ಸಿಡಿ ಹೋಗುತ್ತದೆ ಎಂಬ ಬಗ್ಗೆ ಕೂಡ ನಾವು ಲೆಕ್ಕ ಹಾಕಬೇಕಾಗುತ್ತದೆ. ಅವರು regular ಕೊಡಬೇಕೆಂದು ಹೇಳುತ್ತಿದ್ದಾರೆ. Subsidy ಎಷ್ಟು cut ಆಗುತ್ತದೆಂಬುದನ್ನು ಸರ್ಕಾರ, ಅಧಿಕಾರಿಗಳು ಗಮನಹರಿಸಲಿಲ್ಲ. ನಾನು ಮೊನ್ನೆ ಇದರ ಬಗ್ಗೆ ಡಾ॥ ಸುಬ್ರಹ್ಮಣ್ಯಂರವರ ಜೊತೆ ಮಾತನಾಡಿದ್ದೇನೆ. Treasury system ಅನ್ನು ಬಹಳ ಚೆನ್ನಾಗಿ improve ಮಾಡಿದ್ದಾರೆ. ಈ ವ್ಯವಸ್ಥೆಯ ಬದಲಾವಣೆಯನ್ನು ಮಾಡಿದ್ದಕ್ಕೆ I must complement him. ಪ್ರತಿಯೊಬ್ಬ ರೈತ, ಫಲಾನುಭವಿಯಿಂದ ನೇರ ಹಣ ಸಿಗುವ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ನಾನು treasury ಗೆ ಹೋಗಿ ನೋಡಿ ಬಂದಿದ್ದೇನೆ. They have done a wonderful job. I must complement them. ಆಶ್ರಯ ಮನೆ ಯೋಜನೆಯಲ್ಲಾಗಲೀ, ಯಾವುದರಲ್ಲೇ ಆಗಲಿ ನೇರವಾಗಿ ಅವರವರ account ಗೆ ಹೋಗುವಂಥ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಆಗ ನಿಜವಾಗಿ ಸರ್ಕಾರ subsidy ಕೊಟ್ಟಿದ್ದರ ಸೌಲಭ್ಯ ಅವರಿಗೆ ಸಿಗುತ್ತದೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಬೇರೆ ಬೇರೆ ಸಂಸ್ಥೆಗಳಿಗೆ, ಮಠಗಳಿಗೆ ಹಣ ಕೊಟ್ಟಿದ್ದರ ಬಗ್ಗೆ ಸ್ವಲ್ಪ ಬೇಸರ ಮಾಡಿಕೊಂಡರು. ಬೇಸರ ನಮಗೂ ಆಗಿದೆ. ಆಶ್ರಯ ಮನೆಗೆ ಹಣ ಕೊಟ್ಟಿದ್ದು 10 ಸಾವಿರ ರೂಪಾಯಿ ವಾಪಸ್ ಕೊಡುವಾಗ ಅವನು 11% ಬಡ್ಡಿ ಸಮೇತ 22 ಸಾವಿರ ರೂಪಾಯಿ ಕೊಡಬೇಕಾಗುತ್ತದೆ. ಅವನಿಗೆ ಒಂದು ಸಾರಿ concession ಕೊಡಿ ಎಂದರೆ ಕೊಡುವುದಿಲ್ಲ. ಸರ್ಕಾರ Housing ನಲ್ಲಿ ಆಶ್ರಯ ಮನೆಗಳಿಗೆ ಹಣವನ್ನು ನೀವು ಕೊಡುತ್ತೇವೆಂದು 6 ಲಕ್ಷ ಮನೆಗಳನ್ನು ಮಾಡುತ್ತೇವೆಂದು

ಹೇಳುತ್ತೀರಿ. ನೀವು ಮನೆಯನ್ನು ತೆಗೆದುಕೊಳ್ಳುವವನಿಗೆ ಹಾಕುವ condition ನಲ್ಲಿ ಅವನಿಗೆ ಮನೆಯೇ ಸಿಗುವುದಿಲ್ಲ. ಅವನಿಗೆ RTC ಬೇಕು. ಅಂಬೇಡ್ಕರ್ ಮನೆ ಕಟ್ಟಲಿಕ್ಕೂ RTC ಬೇಕು. RTC ಎಷ್ಟು ಜನರಿಗೆ ಇದೆ? ನೀವು ಮನೆಯನ್ನು ಕೊಟ್ಟಿದ್ದೀರಿ. ಅವನಿಗೆ ತೆಗೆದುಕೊಳ್ಳಲಿಕ್ಕಾಗಲಿಲ್ಲ. ನಾವು sanction ಮಾಡಿದ್ದೇವಷ್ಟೇ. ಅದಾಗಬಾರದು. SC/ST ಯವರಿಗೆ RTC ಅಗತ್ಯವಿರಲಿಲ್ಲ. ಅದನ್ನು ಬದಲಾವಣೆ ಮಾಡುವ ಅಗತ್ಯವೇನಿತ್ತು? ದಯವಿಟ್ಟು, ಅದರ ಬಗ್ಗೆ ಪುನರ್ ಪರಿಶೀಲನೆಯನ್ನು ಮಾಡಿ. ಇಂದಿರಾ ಆವಾಸ್‌ಗೆ ಮತ್ತು ಅಂಬೇಡ್ಕರ್ ಮನೆಗಳಿಗೆ RTC ಅಗತ್ಯವಿಲ್ಲವೆನ್ನುವ ಬದಲಾವಣೆಯನ್ನು ಮಾಡಬೇಕು. ದಯವಿಟ್ಟು ಇದನ್ನು ಬದಲಾವಣೆ ಮಾಡಿ. ಇಲ್ಲದಿದ್ದರೆ, ಹೆಸರಿಗೆ ಮಾತ್ರ 6 ಲಕ್ಷ ಮನೆಗಳನ್ನು ಕೊಡುತ್ತೇವೆಂದು ಕಾರ್ಯಕ್ರಮವನ್ನು ಹಾಕಿಕೊಂಡು announce ಮಾಡಲಿಕ್ಕೆ ಸಾಧ್ಯವಾಗುವುದು ಬಿಟ್ಟರೆ ಇದರಿಂದ ಜನರಿಗೆ ಏನೂ ಸಹಾಯವಾಗುವುದಿಲ್ಲ. ಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಸಂಸ್ಥೆಗಳನ್ನು ತೆರೆಯುವಂಥದ್ದು, ಕಾಲೇಜುಗಳನ್ನು ತೆರೆಯುವಂಥದ್ದು, ಕೆಲವೇ ಕ್ಷೇತ್ರಗಳಿಗೆ, ಕೆಲವೇ ಜಿಲ್ಲೆಗಳಿಗೆ ಮಾತ್ರ ಇದೆ. ಇದು ನೋಡುವವರಿಗೆ ಅಪಹಾಸ್ಯಕ್ಕೀಡಾಗುತ್ತದೆ. ಬೇರೆ ಬೇರೆ ಕಡೆಗಳಲ್ಲಿ ಮಾಡಿ. ರಾಮನಗರವನ್ನು health city ಮಾಡಬೇಕೆಂದಿದ್ದಾರೆ. ಅಲ್ಲೀಗ ವಿರೋಧ ಶುರುವಾಯಿತಲ್ಲ. ಬೇಡವೆಂದು ಹೇಳುತ್ತಿದ್ದಾರೆ. ರೈತರ ಭೂಮಿಯನ್ನು acquire ಮಾಡಿ ಮಾಡುವುದಲ್ಲವೇ ಅದು? ಮೊನ್ನೆ ರೋಷನ್ ಬೇಗ್‌ರವರು ಚೆನ್ನಾಗಿ ಹೇಳಿದರು. ಎಲ್ಲೆಲ್ಲಿ ದೊಡ್ಡ ದೊಡ್ಡ industry ಯವರು ಬರುತ್ತಾರೆಂದು ಸುದ್ದಿಯನ್ನು ಮಾಡುತ್ತಾರೆ, ಅಲ್ಲಿಯೂ ರೇಟ್ ಜಾಸ್ತಿಯಾಗಲು ಶುರುವಾಗುತ್ತದೆ. ಇದು ಹೇಗೆಂದರೆ, ಮೊದಲೇ ಜಾಗ ತೆಗೆದುಕೊಂಡು programme announce ಮಾಡುವುದು. ಹಾಗಿದೆ. ಬೇರೆ ಬೇರೆ ಕಡೆಗೆ ಮಾಡಿ. ದಾವಣಗೆರೆಯಲ್ಲಿ ಮಾಡಿ. Real Estate Business. ಸರ್ಕಾರದ ಕಾರ್ಯಕ್ರಮ announce ಮಾಡುವುದು, ಇದನ್ನು ತಪ್ಪಿಸುವ ಕೆಲಸವನ್ನು ಮಾಡಬೇಕು. ಇನ್ನು, ಸಾರಾಯಿ ನಿಷೇಧದ ವಿಚಾರ. ನಮ್ಮ ಕಮಿಟಿಯಲ್ಲೂ ರೆಕಮೆಂಡ್ ಮಾಡಿದ್ದವು. Total ban on liquors ಮಾಡಿದರೆ ಮಾತ್ರ ನೀವು ಬಜೆಟ್‌ನಲ್ಲಿ ಏನನ್ನು ಹೇಳಿದ್ದೀರಿ, announce ಮಾಡಿದ್ದೀರಿ,

ಅದನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ ಬಿಟ್ಟರೆ ಸಾರಾಯಿಯನ್ನು ban ಮಾಡಿದರೆ illicit liquor ಜಾಸ್ತಿಯಾಗುತ್ತದೆ. ಅದನ್ನು ತಡೆಯಲು ಹಣ ಬೇಕಾಗುತ್ತದೆ. ಅದರೊಟ್ಟಿಗೆ Indian Made Liquors. ಅದರ ಮೇಲೆ duty ಜಾಸ್ತಿ ಇಟ್ಟಿದ್ದೀರಿ. License fee ಜಾಸ್ತಿ ಮಾಡಿದ್ದೀರಿ. ಏಕೆಂದರೆ, ಇಲ್ಲಿ illicit ಗೆ ಜಾಸ್ತಿ ಅವಕಾಶವಿದೆ. ಮೊಲಾಸಿಸ್ ಎಲ್ಲಿ ಹೋಗುತ್ತದೆ ಗೊತ್ತಿದೆಯೇ? ಅದು illicit ನವರಿಗೆ ಹೋಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಆಶ್ರಯ ಮನೆಗೆ 25 ಸಾವಿರ ರೂಪಾಯಿ ಇಡುತ್ತೀರಿ. ತಾವೇ Housing Minister ಇದ್ದೀರಿ. ಅದೇ ಮನೆಯನ್ನು Slum Board ನಿಂದ ಬೆಂಗಳೂರಿನಲ್ಲಿ ಕಟ್ಟಿದರೆ 80 ಸಾವಿರ ರೂಪಾಯಿ unit cost ಇಡುತ್ತೀರಿ. Town ಎಂದ ತಕ್ಷಣ 80 ಸಾವಿರ ರೂಪಾಯಿ. ಚಿಕ್ಕನಾಯಕನಹಳ್ಳಿಯಲ್ಲಿ ಕಟ್ಟಿದರೆ 80 ಸಾವಿರ ರೂಪಾಯಿ, ಪಕ್ಕದ ಹಳ್ಳಿಯಲ್ಲಿ ಕಟ್ಟಿದರೆ 25 ಸಾವಿರ ರೂಪಾಯಿ. ಮನೆಯಿಂದ ಮನೆಗೆ ಅಷ್ಟೊಂದು ವ್ಯತ್ಯಾಸವೇ? ಮತ್ತೆ, ಸರ್ವೆ ನಂಬರ್‌ನಲ್ಲ ಮನೆಯನ್ನು ಕಟ್ಟಿಬಿಡಲಿ. ನೀವೇನಾದರೂ Slum Board ನಲ್ಲಿ, ಇನ್ನೊಂದು scheme ನಲ್ಲಿ ಮನೆ ಕಟ್ಟಿದರೆ 80,000 ಕೊಡುತ್ತಿದ್ದೀರಿ in which 70,000 is subsidy. ಆಶ್ರಯದಲ್ಲಿ ನೀವು 50% subsidy ಕೊಡುತ್ತೀರಿ. ಬಡವರು, ಹಳ್ಳಿಯ ಜನ ಎನ್ನುತ್ತೀರಿ, 25,000 ರೂಪಾಯಿಗಳಿಗೆ ಮಿತಿ ಇಡುತ್ತೀರಿ. ಇದು ಯಾವ ವೈಜ್ಞಾನಿಕ ತೀರ್ಮಾನ? ಎರಡನೆಯದಾಗಿ, ಆಶ್ರಯ ಸಮಿತಿ ಮಾಡಲಿಕ್ಕೆ ಹೋಗಲಿ ಕೇಂದ್ರ ಸರ್ಕಾರದ ಅನುದಾನ ಬರುವ ಅಂಬೇಡ್ಕರ್, ಇಂದಿರಾ ಆವಾಸ್ ಬಿಟ್ಟುಬಿಡಿ, ಇದನ್ನು ಮಾಡಲಿಕ್ಕೆ ನಿಮಗೇನು ತೊಂದರೆ ಇತ್ತು? Taskforce, vigilance ಎಂದು pass ಆಗಲಿಕ್ಕೆ 3–3 ತಿಂಗಳಾಗುತ್ತದೆ. ಗ್ರಾಮ ಸಭೆ ಮಾಡಿ, ಆಶ್ರಯ ಪಟ್ಟಿಯನ್ನು ಆಯ್ಕೆ ಮಾಡಿ ಕಳುಹಿಸಿ ಎಂದು ನಿಮ್ಮ Rajiv Gandhi Corporation ನವರು ಎರಡು ದಿನ time ಕೊಡುತ್ತಾರೆ. ಯಾವತ್ತಾದರೂ ತರಿಸಿಕೊಂಡು ನೋಡಿದ್ದೀರಾ? ಒಂದು ಗ್ರಾಮ ಸಭೆ ಮಾಡಲಿಕ್ಕೆ time ಎಷ್ಟು ಬೇಕು? ಅಷ್ಟು ಗ್ರಾಮ ಪಂಚಾಯಿತಿಗಳು ಗ್ರಾಮ ಸಭೆ ಮಾಡಲು Nodal Officers ಎಷ್ಟು ಬೇಕು? ಅಲ್ಲೇನಾದರೂ ಹೆಚ್ಚು ಕಡಿಮೆಯಾದರೆ ತಿದ್ದುಪಡಿ ಮಾಡಲು time ಎಷ್ಟು ಬೇಕು? ನಿಮ್ಮ Corporation ತೀರಾ ಅವೈಜ್ಞಾನಿಕವಾಗಿ

ನಡೆಯುತ್ತಿದೆ. ಸ್ವಲ್ಪ ತಾವು ಗಮನ ಕೊಡಬೇಕು. Committee ಮಾಡುವುದರ ಬಗ್ಗೆ ಮತ್ತು unit cost ಜಾಸ್ತಿ ಮಾಡುವ ಬಗ್ಗೆ ಹೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಜಯಪ್ರಕಾಶ್ ಹೆಗ್ಡೆಯವರು, ಮಾಧುಸ್ವಾಮಿಯವರು ಒಳ್ಳೆಯ ರೀತಿಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ನಿನ್ನೆ ಮೊನ್ನೆ ವಸತಿ ಸಚಿವರ ಜೊತೆ ಈ ವಿಷಯದ ಕುರಿತಂತೆ ವೈಯಕ್ತಿಕವಾಗಿ ಮಾತನಾಡಿ, ಪತ್ರವನ್ನೂ ಕೊಟ್ಟು, ವಿನಂತಿಯನ್ನೂ ಮಾಡಿದ್ದೇನೆ. ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಲ್ಲಿ ವಿಶೇಷವಾಗಿ ನಮ್ಮೆಲ್ಲರಿಗೆ ಏನು ತೊಂದರೆಯಾಗುತ್ತಿದೆ ಎಂದರೆ, ಪಂಚಾಯಿತಿಗಳಿಗೆ ಸರ್ಕಾರ ಕಳೆದ ವರ್ಷ 40 ಮನೆ ಕೊಟ್ಟಿತ್ತು, ಈ ವರ್ಷ 60 ಮನೆ ಕೊಟ್ಟಿದೆ. ಬಹಳ ಒಳ್ಳೆಯ ಕೆಲಸವಾಗಿದೆ. ಒಂದೊಂದು ಪಂಚಾಯಿತಿಗೆ ಇಷ್ಟಿಷ್ಟು ಮನೆ ಕೊಡುತ್ತಿರುವುದು, ಸರ್ಕಾರದಲ್ಲಿ ಬಡವರಿಗೆ ಮನೆ ಕೊಡುವ ಒಂದು ಯೋಜನೆ, ಪ್ರಯತ್ನವಾಗುತ್ತಿದೆ. ಆದರೆ, ಇಲ್ಲಿ ಯಾವ ಉದ್ದೇಶವಿಟ್ಟುಕೊಂಡು ನಾವು ಕೊಡುವುದಕ್ಕೆ ಬಯಸುತ್ತೇವೋ ಸ್ಥಳೀಯವಾಗಿ ಅದು implement ಆಗುವುದಿಲ್ಲ. ಏಕಾಗುವುದಿಲ್ಲವೆಂದರೆ, ನಮ್ಮಂಥ ಜಿಲ್ಲೆಗಳಲ್ಲಿ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಮನೆ ಕಟ್ಟಿಕೊಂಡಿದ್ದಾರೆ. ಅವನಲ್ಲ, ಅವನಪ್ಪನಲ್ಲ, ಅವನ ಅಜ್ಜ ಒತ್ತುವರಿ ಮಾಡಿಕೊಂಡು ಮನೆ ಕಟ್ಟಿಕೊಂಡಿದ್ದಾನೆ. ನಾವು ಮನೆಗೆ ಮನೆ ನಂಬರ್ ಕೊಟ್ಟಿದ್ದೇವೆ. ಅವನಿಗೆ Voter card ಕೊಟ್ಟಿದ್ದೇವೆ. Ration Card ಕೊಟ್ಟಿದ್ದೇವೆ. ನಾವು ಕರೆಂಟ್ ಕೊಟ್ಟಿದ್ದೇವೆ. ನಾವು ರಸ್ತೆ ಮಾಡಿಕೊಟ್ಟಿದ್ದೇವೆ, ನೀರನ್ನು ಕೊಟ್ಟಿದ್ದೇವೆ. ಎಲ್ಲ ನಾಗರಿಕ ಸೌಲಭ್ಯ ಕೊಟ್ಟ ನಂತರ ಈಗ RTC ಇಲ್ಲವೆನ್ನುವ ಕಾರಣಕ್ಕಷ್ಟೇ ಅವನಿಗೆ ಮನೆ ಕೊಡುವುದಕ್ಕೆ ಬರುವುದಿಲ್ಲವೆನ್ನುವುದನ್ನು ನೋಡಿದರೆ ನಾವಿನ್ನೂ ಯಾವ ಕಾಲದಲ್ಲಿದ್ದೇವೆನ್ನುವುದು ಅರ್ಥವಾಗುವುದಿಲ್ಲ. ನಿಜ. Central Forest Conservation Act ಇದೆ. ಆದರೆ, ನಮಗೆ ಮನೆ ನಂಬರ್ ಮೇಲಾದರೂ registration ಮಾಡಿಕೊಂಡು ಅದನ್ನು ಕೊಡುವುದಕ್ಕೆ ಬಯಸದೇ ಹೋದರೆ ರಾಜ್ಯ ಮಟ್ಟದಲ್ಲಿ ಸರ್ಕಾರದ ಉದ್ದೇಶವೇನಿರುತ್ತದೆಯೋ ಅದು ಸ್ಥಳೀಯ ಮಟ್ಟದಲ್ಲಿ ಈಡೇರದೇ ಇರುವಂಥ ಸ್ಥಿತಿಗೆ ನಾವು ಬರುತ್ತಿದ್ದೇವೆ. ಹಾಗಾಗಿ, ನಿಜವಾಗಿ ಸರ್ಕಾರ ಈ ದೃಷ್ಟಿಯಿಂದ

ತನ್ನ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿ, ಒಂದು ಕಠಿಣವಾದ ನಿರ್ಧಾರವನ್ನು ತೆಗೆದುಕೊಳ್ಳಬೇಕು. ನಮ್ಮ Rajiv Gandhi Housing Corporation ನವರಿಗೆ ಹೇಳಬೇಕು ಅಥವಾ Forest ಇಲಾಖೆಗೆ ಹೇಳಬೇಕು. Land ಅವರದ್ದು ತಾನೆ. Land possession ಅವರ ಹತ್ತಿರವಿರಲಿ. ಆಸ್ತಿ registration ವಿಷಯಕ್ಕೆ ನಾನು ಹೋಗುವುದಿಲ್ಲ. ಅದು ಮತ್ತೆಲ್ಲ ಬೇರೆ ಬೇರೆ ರೀತಿಯ ಸಮಸ್ಯೆಯಾಗಬಹುದು. ಆದರೆ, ಮನೆಗಾದರೂ ನಾವು ಮನೆಯನ್ನು register ಮಾಡಿಕೊಂಡು ಮನೆ ನಂಬರ್ ಮೇಲೆ ಅವರಿಗೆ ಮನೆ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಮಾತ್ರ ಎಲ್ಲ ಪಂಚಾಯಿತಿಗಳಲ್ಲಿಯೂ ತಾವು 60 ಮನೆಗಳನ್ನೇನು ಕೊಟ್ಟಿದ್ದೀರಿ ಅದನ್ನು ಅನುಷ್ಠಾನ ಮಾಡಿ. ಆಗ ಅದು ಅವರಿಗೆ ಸಾಧ್ಯವಾಗುತ್ತದೆ. ನೀವು ಹೇಳಿದ ಹಾಗೆ, unit cost ಜಾಸ್ತಿಯಾಗಬೇಕು. ಬೇರೆ ಬೇರೆ ಅಂಶಗಳಿವೆ, ಅನೇಕ ಸಂಗತಿಗಳಿವೆ. ಮಲೆನಾಡಿನ ಈ ಒಂದು ಅಂಶವನ್ನೂ ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ತಾಲ್ಲೂಕು ಘಟಕ ಮಾಡಿ, ಆಶ್ರಯದಲ್ಲಿ ಮನೆ allotment ಮಾಡಲಿ. ಎಲ್ಲಿಯೋ Scheduled Caste ಹೆಚ್ಚಾಗಿರುವ ಪಂಚಾಯಿತಿಗಳಿರುತ್ತವೆ, ಇನ್ನೆಲ್ಲಿಯೋ Scheduled Caste ಇಲ್ಲದಿರುವ ಪಂಚಾಯಿತಿ ಇರುತ್ತವೆ. We are not able to give. ಜೆ.ಸಿ. ಪುರ ನಮ್ಮ ಊರು. ಅಲ್ಲಿ Scheduled Caste population ಇಲ್ಲ. ಅಲ್ಲಿ 2–2 ಮನೆ ಕೊಟ್ಟಿದ್ದೀರಿ. ಅಲ್ಲಿಗೆ 20 ಮನೆ ಕೊಟ್ಟಿದ್ದೀರಿ. ನಾವೇನು ಮಾಡೋಣ? ತಿಮ್ಮನಹಳ್ಳಿ ಎಂಬ ಊರಿದೆ. ಅಲ್ಲಿ ಊರ ತುಂಬ Scheduled Caste ಜನರಿದ್ದಾರೆ. ಅಲ್ಲಿ ಕೊಡುವುದಕ್ಕಾಗುವುದಿಲ್ಲ. At least, ನಮಗೇನು ತಾಲ್ಲೂಕಿಗೆ ಕೊಡಬೇಕೋ ಅದನ್ನು ಕೊಡಿ. ಅಲ್ಲಿ ಯಾರಿದ್ದಾರೆ, ಎಲ್ಲೆಲ್ಲಿ ಯಾವ category ಯ people ಇದ್ದಾರೆ ಅವರಿಗೆ ಕೊಡುವುದಕ್ಕಾದರೂ ತಾವು ಅನುಕೂಲ ಮಾಡಿಕೊಡಿ. ಪಂಚಾಯಿತಿಗೆಂದು ಕೊಟ್ಟರೆ population ಇಲ್ಲದ ಕಡೆ ನಾವೇನು ಮಾಡಬೇಕು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಬ್ಯಾಂಕ್‌ನಲ್ಲಿ 7% ನಲ್ಲಿ ಮನೆ ಲೋನ್ ಕೊಡುತ್ತಾರೆ. 50% subsidy, ಉಳಿದಿದ್ದಕ್ಕೆ 11% ಬಡ್ಡಿ ಇದೆ. ಅದನ್ನು ನೀವು ಕಡಿಮೆ ಮಾಡಬೇಕು.

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :–ಅದನ್ನು ಕಡಿಮೆ ಮಾಡೋಣ.

ಶ್ರೀ ಕೆ.ಎನ್. ರಾಜಣ್ಣ :– ಮಾಧುಸ್ವಾಮಿಯವರು ಹೇಳಿದ ಹಾಗೆ, unit cost ಏನಿದೆ, ಒಂದೇ ಬೀದಿಯಲ್ಲಿ ಒಂದು ಕಸಬಾ ಹೋಬಳಿ ಎಂದು ಒಂದು ಸರ್ವೆ ನಂಬರ್ ಇರುತ್ತದೆ. ಈ ಕಡೆ ಸಿಟಿ, ಟೌನ್ ಎಂದು ಹೇಳಿ ಪಕ್ಕದಲ್ಲಿ ಅದೂ ಒಂದೇ ಬೀದಿ, 30 ಅಡಿ ಅಂತರದಲ್ಲಿಯೇ ಒಂದೊಂದು unit cost ಗೆ 80,000, 25,000 ಎಂದರೆ, ಅದು ಬಹಳ ವ್ಯತ್ಯಾಸವಾಗುತ್ತದೆ. ಅದನ್ನು ಸರಿಪಡಿಸುವುದು ಹೇಗೆಂದು ತಾವು ಚಿಂತನೆ ಮಾಡಿ. ಅವರು ಹೇಳಿರುವ ಇನ್ನೊಂದು ಪ್ರಮುಖ ಪ್ರಶ್ನೆ ಎಂದರೆ, ಆಶ್ರಯ ಸಮಿತಿಗಳನ್ನು ಕ್ಷೇತ್ರವಾರು MLA ಅಧ್ಯಕ್ಷತೆಯಲ್ಲಿ ಮಾಡತಕ್ಕಂಥದ್ದು ಇದೆ. ತಾಲ್ಲೂಕುವಾರು ಮಾಡಿದರೆ ಪ್ರಯೋಜನವಾಗುವುದಿಲ್ಲ. ಕ್ಷೇತ್ರವಾರು ಮಾಡಿ ನೀವು ಪಂಚಾಯಿತಿಗೆ 60 ಮನೆ ಎಂದು ಕೊಡುತ್ತೀರಿ, ಅದರಿಂದ ಆ ಕ್ಷೇತ್ರಕ್ಕೆ ಗುರಿ ಎಂದು ಒಟ್ಟಾರೆಯಾಗಿ ಕೊಟ್ಟರೆ, ಮಾಧುಸ್ವಾಮಿ, ಜಯಪ್ರಕಾಶ್ ಹೆಗ್ಡೆ, ಕಾಗೇರಿಯವರು ಹೇಳಿದ ಹಾಗೆ, ಕೆಲವು ಕಡೆ SC/ST ಗಳು ಹೆಚ್ಚಿರುತ್ತಾರೆ. ಕೆಲವು ಪಂಚಾಯಿತಿಗಳಲ್ಲಿ 1% ಇರುವುದಿಲ್ಲ. ನೀವು ಅವನಿಗೆ ಅಲ್ಲಿ reservation ಕೊಡಿ ಎಂದು ಹೇಳುತ್ತೀರಿ, ಅಲ್ಲಿ ಕೊಡಲಿಕ್ಕೆ ಹೋದರೆ, ಇಲ್ಲಿ ಹೆಚ್ಚಿರುವ ಜಾಗದಲ್ಲಿ ಇವರಿಗೆ ಅನ್ಯಾಯವಾಗುತ್ತದೆ. ಹಾಗಾಗಿ, ನೀವು ಗುರಿಯನ್ನು ಪಂಚಾಯಿತಿವೈಸ್ ನಿಗದಿ ಮಾಡತಕ್ಕಂಥದ್ದು ಅವೈಜ್ಞಾನಿಕವಾಗುತ್ತದೆ. ಮೊನ್ನೆ ಶಕುಂತಲಾಶೆಟ್ಟಿಯವರ ಪ್ರಶ್ನೆಗೂ ಕೂಡ ಅದೇ ರೀತಿಯಾದಂಥ ಉತ್ತರ ಕೊಟ್ಟಿದ್ದೀರಿ. ಆಗಲೂ ಕೂಡ ನಾವು ಇದೇ ಮಾತನ್ನು ಹೇಳಿದ್ದೇವೆ. ತಾವು ಈಗಲಾದರೂ ಕೂಡ ಈ ಬೇಲೂರು ಘೋಷಣೆ ಎನ್ನುವುದನ್ನು ಕಾಂಗ್ರೆಸ್‌ನವರು ಇಟ್ಟುಕೊಂಡು ಪಾಪ ಅವರು ಪೂಜೆ ಮಾಡಿಕೊಳ್ಳಲಿ. ಬೇಡವೆಂದು ಹೇಳುವುದಿಲ್ಲ. ನೀವೊಂದು ಮತ್ತೆ ಹಳೇಬೀಡು ಘೋಷಣೆ ಎಂದು ಮಾಡಿ. ಬಳ್ಳಾರಿ ಜಿಲ್ಲೆಗೆ ಸೋನಿಯಾಗಾಂಧಿಯವರನ್ನು ಕರೆದುಕೊಂಡು ಬಂದು ಬೇಲೂರು ಘೋಷಣೆ ಮಾಡಿಸಿದರು. ಅದರ ಬಗ್ಗೆ ನನ್ನ ಆಕ್ಷೇಪಣೆ ಇಲ್ಲ. ಆದರೆ ನೀವು ಅಂಥದೊಂದು ಘೋಷಣೆ ಮಾಡಿ. ಮಾನ್ಯ ಮಾಧುಸ್ವಾಮಿಯವರು ಹೇಳಿದ

ಹಾಗೆ, ಅಂಬೇಡ್ಕರ್ ಮತ್ತು IAY ಯೋಜನೆಗೆ ಕೇಂದ್ರ ಸರ್ಕಾರದಿಂದ ಹಣ ಬರುತ್ತದೆ. ಪಂಚಾಯತಿಗೆ ಇದನ್ನು ಕೊಡದಿದ್ದರೆ ಅವರು ಸದರಿ ಯೋಜನೆಯನ್ನು ಕೇಂದ್ರ ಸರ್ಕಾರ ನಿಲ್ಲಿಸುತ್ತಾರೆಂಬ ಕಾರಣ ಇದೆ. ಆದರೆ ಆಶ್ರಯ ಯೋಜನೆಗಳಿಗೆ ರಾಜ್ಯ ಸರ್ಕಾರದಿಂದ ಹಣಕೊಡಲಾಗುತ್ತದೆ. ಆದ್ದರಿಂದ ಇದಕ್ಕೂ ಅದನ್ನು ಅನ್ವಯ ಮಾಡುವುದು ಸರಿಯಲ್ಲ. ಆದ್ದರಿಂದ ಆಶ್ರಯ ಮನೆಗಳಿಗಾದರೂ ಶಾಸಕರ ಅಧ್ಯಕ್ಷತೆಯಲ್ಲಿ ಕ್ಷೇತ್ರವಾರು ಕಮಿಟಿ ರಚನೆ ಮಾಡಬೇಕು ಮತ್ತೆ ಏನು ಮಿತಿಯನ್ನು ಕೊಡುತ್ತಿದ್ದೀರಿ, ಅದನ್ನು ಕ್ಷೇತ್ರಕ್ಕೆ ಇಷ್ಟೆಂದು ಗುರಿ ಮಾಡಿ ಕೊಟ್ಟರೆ ಕೆಲಸ ಆಗುವುದಕ್ಕೆ ಸಾಧ್ಯವಾಗುತ್ತದೆ. ನಾವು 6 ಲಕ್ಷ ಮನೆ ಕಟ್ಟುತ್ತೇವೆಂದು ಮತ್ತು ಇರತಕ್ಕಂಥ ಗುಡಿಸಲುಗಳನ್ನು ತೆಗೆದು ಹಾಕಿ ಬಿಡುತ್ತೇವೆಂದು ಮಾತನಾಡುವಾಗ ನಾವು ಜಾಗ್ರತೆಯಾಗಿ ಕೆಲಸ ಮಾಡಿ ತೋರಿಸಬೇಕಾಗುತ್ತದೆ. ಆದ್ದರಿಂದ ತಾವು ಆದಷ್ಟು ಜಾಗ್ರತೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಹೆಚ್. ಆಂಜನೇಯ :- ಮಾನ್ಯ ಉಪಾಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ವಸತಿಯ ಪ್ರಗತಿಯ ಸೊನ್ನೆ. ಇದಕ್ಕೆ ಕಾರಣವೇನೆಂದರೆ, ಗ್ರಾಮ ಪಂಚಾಯತ್‌ಗೆ ಮನೆ ಹಂಚಿಕೆ ಮಾಡಿದ್ದರಿಂದ ಇದು ಆಗಿಲ್ಲ. ತಾವು ಹಿಂದುಳಿದ ವರ್ಗದಿಂದ ಬಂದಿರತಕ್ಕಂಥ ಒಬ್ಬ ಮಂತ್ರಿ. ವಸತಿಯಲ್ಲಿ ಪ್ರಗತಿಯಾಗಿಲ್ಲ, ವಸತಿ ಯೋಜನೆ ನಿಷ್ಕ್ರೀಯ ಆಗಿದೆ ಎಂಬ ಅಪಕೀರ್ತಿಗೆ ನೀವು ಒಳಗಾಗಬೇಡಿ. ಆಶ್ರಯ ಸಮತಿಗಳನ್ನು ನೇಮಕ ಮಾಡಿ ತ್ವರಿತಗತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಮನೆ ಕಟ್ಟುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾವು ಸೇರಿರತಕ್ಕಂಥ ಅಧಿವೇಶನದಲ್ಲಿ ಮೂರನೇ ಬಾರಿ ಇಲ್ಲಿ ಆಗ್ರಹ ಮಾಡುತ್ತಿದ್ದೇವೆ. ಆದರೆ, ನೀವು ಮಾಡಿಕೊಡುತ್ತಿಲ್ಲ, ಏಕೆಂದೂ ಕೂಡ ನಮಗೆ ಗೊತ್ತಾಗಲಿಲ್ಲ. ಈ ಅಧಿವೇಶನ ಮುಗಿಯುವುದರೊಳಗೆ ಅದಕ್ಕೆ ಬೇಕಾಗಿರತಕ್ಕಂಥ ತಿದ್ದುಪಡಿಯನ್ನು ತಂದು ಶಾಸಕರ ಅಧ್ಯಕ್ಷತೆಯಲ್ಲಿ ಆ ಸಮಿತಿಯನ್ನು ರಚನೆ ಮಾಡಿ ಬಡವರಿಗೆ ಮನೆ ಕಟ್ಟಿಸಿಕೊಡತಕ್ಕಂಥ ಕೆಲಸ ತ್ವರಿತಗತಿಯಲ್ಲಿ ಆಗಬೇಕಾಗಿದೆ. ಆದ್ದರಿಂದ ಈ ಒಂದು ಶಾಸನವನ್ನು ತಂದು ಆದಷ್ಟು ಬೇಗ ಅನುಷ್ಠಾನಗೊಳಿಸಬೇಕೆಂದು ಮಾನ್ಯ ಉಪಾಧ್ಯಕ್ಷರ ಮೂಲಕ ತಮ್ಮಲ್ಲಿ ಒತ್ತಾಯ ಮಾಡುತ್ತೇನೆ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ನಮ್ಮ ವಿರೋಧವಿದೆ. ಪಂಚಾಯತ್‌ರಾಜ್ ವ್ಯವಸ್ಥೆ ಮೂಲಕ ಕೊಟ್ಟಿರತಕ್ಕಂಥ ಅಧಿಕಾರವನ್ನು ಕಿತ್ತುಕೊಳ್ಳತಕ್ಕಂಥ ಕೆಲಸ ಇವರು ಮಾಡುತ್ತಿದ್ದಾರೆ. ಕಾನೂನಿನಲ್ಲಿ ಇದಕ್ಕೆ ಅವಕಾಶವಿಲ್ಲ. ಹಿರಿಯ ಸದಸ್ಯರಾಗಿರುವ ನೀವು ಬೇಲೂರು ಘೋಷಣೆ ಬಗ್ಗೆ ಇಷ್ಟು ಹಗುರವಾಗಿ ಮಾತನಾಡಬಾರದು. ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ಅಧಿಕಾರ ವಿಕೇಂದ್ರಿಕರಣ ಮಾಡುವುದಕ್ಕೆ ಹೊರಟಿದ್ದೇವೆ. ಆದ್ದರಿಂದ ನೀವು ಇದರ ಬಗ್ಗೆ ಹಗುರವಾಗಿ ಮಾತನಾಡಿದರೆ ಹೇಗೆ? ಇದಕ್ಕೆ ನಮ್ಮ ಒಪ್ಪಿಗೆ ಇಲ್ಲ. ಆದ್ದರಿಂದ ಇದರ ವಿರುದ್ಧ ನಾವು ಹೋರಾಟ ಮಾಡುತ್ತೇವೆ.

ಶ್ರೀ ಡಿ.ಟಿ. ಜಯಕುಮಾರ್ :– ಇದು ಪ್ರಶ್ನೋತ್ತರ ಕಾಲವಲ್ಲ. ಇದರ ಬಗ್ಗೆ ಎಲ್ಲರೂ ಕೂಡ ಪ್ರಶ್ನೆ ಕೇಳಿರತಕ್ಕಂಥದ್ದು ಸಂತೋಷ. ಆದರೆ, ಈಗ ನಾವು ಬಜೆಟ್ ಮೇಲೆ ಚರ್ಚೆ ಮಾಡುತ್ತಿದ್ದೇವೆ.

ಉಪಾಧ್ಯಕ್ಷರು :– ಈಗ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಬಜೆಟ್ ಮೇಲೆ ಮಾತನಾಡುತ್ತಿದ್ದಾರೆ. ತಾವೆಲ್ಲರೂ ಮಧ್ಯದಲ್ಲಿ ಈ ರೀತಿ ನಿಂತುಕೊಂಡು ಕೇಳಿದರೆ ಅವರು ಉತ್ತರ ಹೇಳಬೇಕೋ ಅಥವಾ ಬೇಡವೋ? ಮಾನ್ಯ ಬಾಲರಾಜ್‌ರವರೆ ತಾವು ಕುಳಿತುಕೊಳ್ಳಿ.

ಶ್ರೀ ಡಿ.ಟಿ. ಜಯಕುಮಾರ್ :– ತಮಗೆಲ್ಲ ಅವಕಾಶ ಕೊಟ್ಟಂಥ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ಮಾತನಾಡಿ.

ಶ್ರೀ ಎಸ್. ಬಾಲರಾಜ್ :– ಇದಕ್ಕೆ ಪೂರಕವಾದಂತೆ ಒಂದು ಪ್ರಶ್ನೆ ಕೇಳುತ್ತೇನೆ.

ಉಪಾಧ್ಯಕ್ಷರು :– ಈಗ ಯಾವ ಪೂರಕವಾದ ಪ್ರಶ್ನೆ ಬೇಡ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಡಿ.ಟಿ.ಜಯಕುಮಾರ್ :– ಈಗ ಎಲ್ಲರೂ ಕೇಳುತ್ತಾ ಹೋದರೆ ಅದು ಪ್ರಶ್ನೋತ್ತರ ಕಾಲ ಆಗುತ್ತದೆ.

ಉಪಾಧ್ಯಕ್ಷರು :- ಈಗ ಆಗುವುದಿಲ್ಲ. ಪೂರಕ ಎಂದು ಹೋಗುತ್ತಿದ್ದರೆ ರಾತ್ರಿ 8 ಗಂಟೆಯಾಗುತ್ತದೆ. ಮಾನ್ಯ ಬಾಲರಾಜ್‌ರವರೆ ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಜಯಪ್ರಕಾಶ್ ಹೆಗ್ಡೆಯವರ ಭಾಷಣ ಇನ್ನೂ ಮುಗಿದಿಲ್ಲ. ತಾವೇಕೆ ಈ ರೀತಿ ಮಾಡುತ್ತೀರಿ?

ಶ್ರೀ ಎಸ್. ಬಾಲರಾಜ್ :- ಮಾನ್ಯ ಉಪಾಧ್ಯಕ್ಷರೆ, ನಾನು ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಮನೆಗಳನ್ನು ಕೊಡತಕ್ಕಂಥ ಪ್ರಕ್ರಿಯೆ ಮಾಡಿ, ಇದಕ್ಕೆ ನಮ್ಮದೇನು ಅಭ್ಯಂತರವಿಲ್ಲ. ಮತ್ತೆ ನಾವು ಪ್ರತಿ ಸಲವೂ ಕೂಡ ಗ್ರಾಮ ಸಭೆಯಲ್ಲಿ ಪಟ್ಟಿ ಮಾಡತಕ್ಕಂಥ ಸಂದರ್ಭದಲ್ಲಿ ಹೊಸ ಹೊಸ ಫಲಾನುಭವಿಗಳು ಹುಟ್ಟಿಕೊಳ್ಳುತ್ತಿರುತ್ತಾರೆ. ಇದನ್ನು ದಯವಿಟ್ಟು ತಾವು ಗಮನಿಸಬೇಕು. ಕಳೆದ ಸಾರಿ ಇದ್ದಂಥವರು ಇರುವುದಿಲ್ಲ, ಮತ್ತೆ ಬೇರೆಯವರು ಬಂದಿರುತ್ತಾರೆ. ಪ್ರತಿ ವರ್ಷ ಗ್ರಾಮಸಭೆಯಲ್ಲಿ ಹೆಚ್ಚುವರಿಯಾಗಿ ಜನ ಬಂದು ಸೇರುವಾಗ ನಾವು ಇಷ್ಟೆಂದು ನಿಗದಿಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನೀವೊಂದು ಕಾರ್ಯಕ್ರಮ ರೂಪಿಸಿ 3–4 ವರ್ಷಕ್ಕೆಂದು ನಿಗದಿ ಮಾಡಿ. ಮತ್ತೆ ಮೊದಲನೇ ಹಂತದಲ್ಲಿಯೇ ಸಂಪೂರ್ಣವಾದಂಥ ಗ್ರಾಮಸಭೆಯನ್ನು ಸರ್ವೆ ಮಾಡಿ ಪೂರ್ಣವಾದಂಥ ಒಂದು ಪಟ್ಟಿಯನ್ನು ಮಾಡಿಸಿ. ಅನಂತರ ಹಂತ ಹಂತವಾಗಿ ವಿತರಣೆ ಮಾಡಿಸಿ. ಈ ಪ್ರಕಾರ ಮಾಡಿದರೆ ಅನುಕೂಲವಾಗುತ್ತದೆ.

(ಗೊಂದಲ)

ಶ್ರೀ ಡಿ.ಟಿ.ಜಯಕುಮಾರ್ :- ಮಾನ್ಯ ಉಪಾಧ್ಯಕ್ಷರೆ, ಈಗ ಬಜೆಟ್ ಮೇಲೆ ಚರ್ಚೆ ನಡೆಯುತ್ತಿದೆ. ಈ ಸಂದರ್ಭದಲ್ಲಿ ಸದರಿ ಪ್ರಶ್ನೆಯನ್ನು ಇಟ್ಟಿದ್ದಾರೆ. ಹಿರಿಯ ಸದಸ್ಯರಾಗಿರತಕ್ಕಂಥ ಮಾನ್ಯ ಮಾಧುಸ್ವಾಮಿಯವರು ಕೊಟ್ಟಿರತಕ್ಕಂಥ ಸಲಹೆ ಬಹಳ ಉಪಯುಕ್ತವಾಗಿದೆ. ಬಿಜೆಪಿ ಮತ್ತು ಜೆಡಿಎಸ್ ಪಕ್ಷ ಸೇರಿ ಮಾನ್ಯ ಹೆಚ್.ಡಿ. ಕುಮಾರಸ್ವಾಮಿ ನೇತೃತ್ವದಲ್ಲಿ ಸಮ್ಮಿಶ್ರ ಸರ್ಕಾರ ಬಂದ ಮೇಲೆ ಮೊದಲು 20 ಸಾವಿರ ರೂಪಾಯಿ ಇದ್ದಂಥದ್ದನ್ನು ಈಗ 25 ಸಾವಿರ ಮಾಡಿದ್ದೇವೆ. ಮತ್ತೆ 60 ಮನೆಗಳನ್ನು ಈಗ ಗ್ರಾಮ ಪಂಚಾಯತಿಗೆ ಕೊಟ್ಟಿರತಕ್ಕಂಥದಕ್ಕೆ ಅನುಗುಣವಾಗಿ

25 ಸಾವಿರದಿಂದ 30 ಸಾವಿರ ರೂಪಾಯಿಗೆ ಹೆಚ್ಚಿಸಿದ್ದೇವೆ. ನಮ್ಮ ಸರ್ಕಾರ ಬಂದು ಇನ್ನೂ ಒಂದು ವರ್ಷಕೂಡ ಆಗಿಲ್ಲ. ಈ ಅವಧಿಯೊಳಗೆ ನಾವು 20 ರಿಂದ 30 ಸಾವಿರ ರೂಪಾಯಿಗೆ ಮಾಡಿದ್ದೇವೆ. ಇದು ಸ್ವಾಗತಾರ್ಹವಾದ ವಿಷಯವಲ್ಲವೇ? ಈಗ ಪಟ್ಟಣ ಪ್ರದೇಶದಲ್ಲಿ 80 ಸಾವಿರ ರೂಪಾಯಿಗಳನ್ನು ಕೊಡಲಾಗುತ್ತಿದೆ. ಆದರೆ, ಇದಕ್ಕೆ ಹಳ್ಳಿ ಪ್ರದೇಶದಲ್ಲಿ 30 ಸಾವಿರ ರೂಪಾಯಿಗಳನ್ನು ಕೊಡತಕ್ಕಂಥಾದ್ದು ಸರಿಯಲ್ಲವೆಂದು, ತಾವು ಹೇಳತಕ್ಕಂಥದ್ದು ನಿಜ. ನಾವು ಕೊಡುತ್ತಿರುವ 30 ಸಾವಿರ ರೂಪಾಯಿ ಸಬ್ಸಿಡಿ ರೇಟ್, ಫಲಾನುಭವಿ ಕೂಡ ಇದಕ್ಕೆ ಹಣ ಹಾಕಿಕೊಂಡು ಕಟ್ಟಿಕೊಳ್ಳತಕ್ಕಂಥ ವ್ಯವಸ್ಥೆ ಇದೆ. ಕೇವಲ 30 ಸಾವಿರ ರೂಪಾಯಿಗಳಲ್ಲಿ ಮನೆ ಕಟ್ಟಿದರೆ 3 ವರ್ಷ ಅಥವಾ ಒಂದು ವರ್ಷ ಕೂಡ ಅದು ಉಳಿಯುವುದಿಲ್ಲ. ಆದ್ದರಿಂದ ಫಲಾನುಭವಿಗಳು ಇದರ ಜೊತೆಗೆ ಹಣ ಹಾಕಿಕೊಂಡು ಮಾಡತಕ್ಕಂಥ ವ್ಯವಸ್ಥೆ ಇದಾಗಿದೆ. ಮತ್ತೆ ಇಲ್ಲಿ ಎಲ್ಲಾ ಶಾಸಕರು ಹೇಳಿರುವ ವಿಷಯದಲ್ಲಿ ನಾನು ಗಮನಿಸಿರುವ ವಿಚಾರ ಏನೆಂದರೆ, ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ಅವಕಾಶವನ್ನು ಕಲ್ಪಿಸಿಕೊಟ್ಟು ಅಧಿಕಾರ ವಿಕೇಂದ್ರಿಕರಣ ಮಾಡಿ ಅಧಿಕಾರವನ್ನು ಅವರಿಗೆ ಕೊಟ್ಟಿರುವುದರಿಂದ ಕೆಲವು ಲೋಪ ದೋಷಗಳು ಆಗುತ್ತಿವೆ. ನಾನು ಇಲ್ಲವೆಂದು ಹೇಳುತ್ತಿಲ್ಲ. ಏಕೆಂದರೆ ಅಲ್ಲಿ ಆಗುತ್ತಿರುವ ಲೋಪದೋಷಗಳು ನಮ್ಮ ಗಮನಕ್ಕೆ ಬಂದಿದೆ. ಅವರಿಗೆ 60 ಮನೆ ಕೊಟ್ಟರೆ ಪಿತ್ರಾರ್ಜಿತ ಆಸ್ತಿ ಎನ್ನುವಂತೆ 60 ಮನೆಗಳಲ್ಲಿ ಸದಸ್ಯರು ಮೂರು ಮೂರು ಮನೆಗಳನ್ನು ಹಂಚಿಕೊಂಡಿದ್ದಾರೆ. ಆದರೆ, ಅವರಿಗೆ ಇದರ ಬಗ್ಗೆ ಗೊತ್ತಿಲ್ಲದೇ ಇರಬಹುದು. ಮತ್ತೆ ಅವರಿಗೆ ತರಬೇತಿ ಕೂಡ ಇಲ್ಲ. ಇಲ್ಲಿ ಸ್ವಾರ್ಥಕ್ಕೋಸ್ಕರ ದುರುಪಯೋಗವಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಅವರು ಅಲ್ಲಿ ಏನು ಮಾಡಿದ್ದಾರೆಂದರೆ, ಅವರುಗಳ ನೆಂಟರಿಷ್ಟರಿಗೆ, ಬಂಧು ಬಳಗದವರಿಗೆ, ಸ್ನೇಹಿತರಿಗೆ ಕೊಡತಕ್ಕಂಥದು ಮತ್ತು ಅಲ್ಲಿ ಆಗಿರುವ ಅವ್ಯವಹಾರ ಕೂಡ ನಮ್ಮ ಗಮನಕ್ಕೆ ಬಂದಿದೆ. ಇವೆಲ್ಲವನ್ನು ನಾವು ಮನಗಂಡು ಬೇಲೂರು ಘೋಷಣೆ ಪ್ರಕಾರ ಮಾಡುವುದಕ್ಕೆ ಬಾರದೇ ಇದ್ದರೂ ಕೂಡ ಎಲ್ಲಾ ಶಾಸಕರು ಸಹಮತವನ್ನು ವ್ಯಕ್ತಪಡಿಸಿದರೆ ಬಹುಶಃ ಮುಂದಿನ ಅಧಿವೇಶನದಲ್ಲಿ ಈ ಬಗ್ಗೆ ತಿದ್ದುಪಡಿ ತರುತ್ತೇನೆ ಮತ್ತೆ ಶಾಸಕರಿಗೆ ಅಧಿಕಾರ ಕೊಡುವ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ.

(ಗೊಂದಲ)

ಉಪಾಧ್ಯಕ್ಷರು :– ಮಾನ್ಯ ಜಯಪ್ರಕಾಶ್ ಹೆಗ್ಡೆಯವರೆ, ತಾವು ಮುಂದುವರೆಸಿ. ಎಲ್ಲರೂ ಕುಳಿತುಕೊಳ್ಳಿ ಅವರು ಏನು ಹೇಳುತ್ತಾರೆ ಎಂದು ಕೇಳಿ.

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ :– ನಾವು ಶಾಸಕರಾಗಿ 33 ತಿಂಗಳಾಗಿದ್ದು, ಇದುವರೆಗೂ ಒಬ್ಬ ಕಡು ಬಡವನಿಗೆ ಮನೆ ಕೊಡುವುದಕ್ಕೆ ಆಗಿಲ್ಲ. ನಾವು ಇವತ್ತಿನ ದಿವಸ ಯಾವುದೇ ಗ್ರಾಮಕ್ಕೆ ಹೋದರೆ ಇಷ್ಟು ದಿವಸವಾದರೂ ನಮಗೆ ಒಂದು ಮನೆ ಕೊಟ್ಟಿಲ್ಲವೆಂದು ಜನರು ನಮಗೆ ಘೇರಾವು ಮಾಡುತ್ತಿದ್ದಾರೆ. ಆ ಕಾರಣಕ್ಕೋಸ್ಕರ ಇದನ್ನು ತಾವು ಮಾಡಲೇ ಬೇಕು.

(ಗೊಂದಲ)

ಉಪಾಧ್ಯಕ್ಷರು :– ಮಾನ್ಯ ರೇಣುಕಾಚಾರ್ಯರವರೆ, ತಾವು ಏನು ಮಾತನಾಡುತ್ತಿದ್ದೀರೆಂಬುದು ಯಾರಿಗೂ ಕೇಳುತ್ತಿಲ್ಲ. ಮಾನ್ಯ ಬಾಲರಾಜ್‌ರವರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ :– ಗ್ರಾಮ ಪಂಚಾಯತಿಗೆ 60 ಮನೆಗಳನ್ನು ಕೊಟ್ಟಿದ್ದಾರೆ. ಎಲ್ಲಾ ಗ್ರಾಮ ಪಂಚಾಯತ್‌ನಲ್ಲಿ ಒಂದು ಮನೆಯನ್ನು 5 ಸಾವಿರ ರೂಪಾಯಿಗೆ ಮಾರಾಟ ಮಾಡಿಕೊಂಡಿದ್ದಾರೆ. ಜನರು ನಮಗೆ ಪ್ರಶ್ನೆ ಕೇಳುತ್ತಾರೆ.

(ಗೊಂದಲ)

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :– ಶಾಸಕರು ಮಾಡುವಾಗ ಎಲ್ಲವನ್ನು ಸರಿಯಾಗಿ ಮಾಡುತ್ತೇವೆಂದು ಇಲ್ಲಿ ಯಾರಾದರೂ ಬರೆದು ಕೊಡುತ್ತಾರಾ? ಶಾಸಕರು ಮಾಡಿರುವಾಗ ತಪ್ಪು ಆಗಿಲ್ಲವೆ? ಆದ್ದರಿಂದ ತಾವು ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ ಈ ರೀತಿಯಾಗಿ ಹಗುರವಾಗಿ ಮಾತನಾಡಬೇಡಿ.

(ಗೊಂದಲ)

ಉಪಾಧ್ಯಕ್ಷರು :- ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ :- ಮಾನ್ಯ ಉಪಾಧ್ಯಕ್ಷರೆ, ನಾನು ಇದುವರೆಗೂ ಸದನದಲ್ಲಿ ಮಾತನಾಡಿಲ್ಲ ದಯವಿಟ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಹೆಚ್. ಆಂಜನೇಯ :- ಈ ಅಧಿವೇಶನ ಮುಗಿಯುವುದರೊಳಗೆ ಇದರ ಬಗ್ಗೆ ಒಂದು ತಿದ್ದುಪಡಿ ತರುವುದಕ್ಕೆ ತಮಗೆ ಏನು ತೊಂದರೆ ಆಗುತ್ತದೆ ಹೇಳಿ? ಇದರ ಬಗ್ಗೆ ತಿದ್ದುಪಡಿ ತರುವುದಕ್ಕೆ ಮುಂದಿನ ಅಧಿವೇಶನದವರೆಗೆ ಏಕೆ ಹೋಗಬೇಕು?

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ :- ಅಧಿಕಾರ ವಿಕೇಂದ್ರೀಕರಣ ಎಂದು ಹೇಳಿ ಅಲ್ಲಿ ಭ್ರಷ್ಟಾಚಾರದ ಹಗರಣವೇ ನಡೆಯುತ್ತಿದೆ. ಆದ್ದರಿಂದ, ಅಲ್ಲಿ ಅಧಿಕಾರ ವಿಕೇಂದ್ರೀಕರಣ ಎಲ್ಲಿದೆ?

(ಗೊಂದಲ)

ಉಪಾಧ್ಯಕ್ಷರು :- ಸುಮ್ಮನೆ ಎಲ್ಲರೂ ಕುಳಿತುಕೊಳ್ಳಿ. ಅವರು ಏನು ಮಾತನಾಡುತ್ತಾರೆಂಬುದನ್ನು ಕೇಳದೇ ಎಲ್ಲರೂ ಸುಮ್ಮನೆ ಮಾತನಾಡುತ್ತಿದ್ದೀರಿ. ಕುಳಿತುಕೊಳ್ಳಿ ಎಂದು ನಾನು ನಿಂತುಕೊಂಡು ಹೇಳುತ್ತಿದ್ದೇನೆ. ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ನೀವುಗಳು ನನಗೆ ಗೌರವ ಕೊಡುವುದಾದರೆ ಕೊಡಿ. ಇಲ್ಲದಿದ್ದರೆ ನಾನು ಹಾಗೆಯೇ ನಿಂತಿರುತ್ತೇನೆ. ಅವರು ಏನು ಮಾತನಾಡುತ್ತಾರೆಂಬುದನ್ನು ಕೇಳದೇ ಎಲ್ಲರೂ ಈ ರೀತಿ ಮಾತನಾಡಿದರೆ ಹೇಗೆ? ಮಾನ್ಯ ಬಾಲಕೃಷ್ಣರವರೆ, ನೀವು ಮಾತನಾಡಿದರೆ ಮತ್ತೆ ನಾನು ನಿಂತುಕೊಳ್ಳಬೇಕಷ್ಟೆ. ದಯವಿಟ್ಟು ಎಲ್ಲರೂ

ಸಹಕಾರ ಕೊಡಿ. ಮೊದಲು ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಮುಗಿಸಲಿ ಆಮೇಲೆ ಮಾತನಾಡುವುದಕ್ಕೆ ಖಂಡಿತವಾಗಿಯೂ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಡಿ.ಟಿ. ಜಯಕುಮಾರ್ :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಎಲ್ಲಾ ಶಾಸಕರ ಭಾವನೆಗಳನ್ನು ಅರ್ಥಮಾಡಿಕೊಂಡಿದ್ದೇವೆ. ಇದೇ ಸದನದಲ್ಲಿ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಎಲ್ಲಾ ಶಾಸಕರ ಒಮ್ಮತ ಅಭಿಪ್ರಾಯವೇನೆಂದರೆ, ಶಾಸಕರನ್ನು ಆಶ್ರಯ ಸಮಿತಿಗೆ ಅಧಯಕ್ಷರನ್ನಾಗಿ ಮಾಡಬೇಕೆಂಬುದಾಗಿದೆ.

(ಗೊಂದಲ)

ಉಪಾಧ್ಯಕ್ಷರು :– ಉದ್ದೇಶವನ್ನು ಹೇಳುತ್ತಿದ್ದಾರೆ.

(ಗೊಂದಲ)

ಡಾ|| ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :– ನೀವು ನಿಮ್ಮ ಪಕ್ಷದ ನಿಲುವು ಎಂದು ಹೇಳಿ. ಈ ಶಾಸನ ಸಭೆಯ ಒಮ್ಮತ ನಿರ್ಣಯ ಎಂದು ನೀವು ಹೇಳಬೇಡಿ.

(ಗೊಂದಲ)

ಉಪಾಧ್ಯಕ್ಷರು :– ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಅನ್ನದಾನಿಯವರೆ, ಧ್ರುವನಾರಾಯಣ್‌ರವರೆ, ರೇಣುಕಾಚಾರ್ಯರವರೆ ಕುಳಿತುಕೊಳ್ಳಿ. ಸಮಸ್ಯೆಯನ್ನು ಇಲ್ಲಿ ಮಾತನಾಡಿದರೆ ಬಗೆಹರಿಯುವಂಥ ಸಮಸ್ಯೆ ಅಲ್ಲ. ದಯವಿಟ್ಟು ನೀವು ಆ ತರಹ ಸ್ಕೋಪ್ ಕೊಡಬೇಡಿ. ಅವರು ಏನು ಹೇಳುತ್ತಾರೆಂದು ಸ್ವಲ್ಪ ಕೇಳೋಣ. ಅದು ಬಿಟ್ಟು ನಿಮ್ಮಷ್ಟಕ್ಕೆ ನೀವುಗಳೇ ಮಾತನಾಡಿದರೆ ಇಲ್ಲಿ ಉತ್ತರ ಏನು ಕೊಡುತ್ತಾರೆ?

ಶ್ರೀ ಡಿ.ಟಿ.ಜಯಕುಮಾರ್ :– ಮಾನ್ಯ ಉಪಾಧ್ಯಕ್ಷರೆ, ಇಲ್ಲ ಎಲ್ಲರ ಅಭಿಪ್ರಾಯವೆಂದು ಹೇಳಲಿಲ್ಲ. ಬಹುಮತ ಎಂದು ನಾನು ಹೇಳಿದೆ. ಎಲ್ಲರ ಅಭಿಪ್ರಾಯದಂತೆ ನಿಮ್ಮ ಅಭಿಪ್ರಾಯವನ್ನು ನೀವು ಹೇಳಿ. ನೀವು ಶಾಸಕರಾಗಿದ್ದೀರಿ, ನಿಮಗೆ ಸ್ವಾತಂತ್ರ್ಯ ಇದೆ, ನೀವು ಹೇಳಿ. ಆದರೆ, ಎಲ್ಲರ ಅಭಿಪ್ರಾಯ ಎಂದು

ನಾನು ಹೇಳಲಿಲ್ಲ. ಎಲ್ಲರ ಅಭಿಮತ ಎಂದು ನಾನು ಹೇಳಲಿಲ್ಲ. ಕೆಲವರು ಅದರ ಪರವಾಗಿದ್ದಾರೆ, ಇನ್ನು ಕೆಲವರು ಅದರ ವಿರುದ್ಧವಾಗಿದ್ದಾರೆ. ಆದರೆ, ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಮೇಜಾರಿಟಿ ಇರತಕ್ಕಂಥದ್ದು. . . .

(**ಗೊಂದಲ**)

ಉಪಾಧ್ಯಕ್ಷರು :– ರೀ ರಾಜೇಂದ್ರ ವರ್ಮಾರವರೇ, ಸಚಿವರು ಮಾತನಾಡಬೇಕಾದರೆ ತಾವು ಕುಳಿತುಕೊಳ್ಳಬೇಕು.

ಶ್ರೀ ಡಿ.ಟಿ.ಜಯಕುಮಾರ್ :– ಈ ವಿಚಾರವನ್ನು ಗಂಭೀರವಾಗಿಯೇ ಪರಿಗಣಿಸಿ ಇದಕ್ಕೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು bill ತರಬೇಕಾಗಿರತಕ್ಕಂಥದ್ದು, ತಿದ್ದುಪಡಿ ತರಬೇಕಾಗಿರತಕ್ಕಂಥದ್ದು. ಇದನ್ನು ಮುಂದಿನ ದಿನಗಳಲ್ಲಿ ಮಾನ್ಯ RDPR Minister ರವರ ಗಮನಕ್ಕೆ ತಂದು ಈ ಬಿಲ್ ಅನ್ನು ತಂದು ಆದಷ್ಟು ಪ್ರಯತ್ನ ಮಾಡುತ್ತೇವೆ. ಆದರೆ, ಇದನ್ನು ಸರ್ಕಾರ ತೀರ್ಮಾನ ಮಾಡುವಂಥಾದ್ದು. ಇರುವಂಥ ವ್ಯವಸ್ಥೆಯನ್ನು ತರಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ.

(**ಗೊಂದಲ**)

ಉಪಾಧ್ಯಕ್ಷರು :– ಮಾನ್ಯ ಜಯಪ್ರಕಾಶ್ ಹೆಗ್ಡೆಯವರೆ, ತಾವು ಮಾತನಾಡಿ ಬೇಗ ಮುಗಿಸಿ.

ಶ್ರೀ ಡಿ.ಟಿ.ಜಯಕುಮಾರ್ :– ಮಾನ್ಯ ವಿಶ್ವೇಶ್ವರ ಹೆಗಡೆಯವರು ಏನು ಹೇಳಿದ್ದಾರೆ, ಉತ್ತರ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಮಾನ್ಯ ಜಯಪ್ರಕಾಶ್ ಹೆಗ್ಡೆಯವರದು ಸಹ ಸಂಬಂಧಪಟ್ಟ ಜಿಲ್ಲೆಯೊಳಗೆ ತೊಂದರೆ ಏನಾಗಿದೆಯೆಂದರೆ, assessment ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. Forest Department ಗೆ ಸೇರಿದಂಥ ಜಾಗ ಏನು ಅವರು ಒತ್ತುವರಿ ಮಾಡಿದ್ದಾರೆ. (**ಗೊಂದಲ**) . . . ಅದಕ್ಕೆ ಸ್ವಾಧೀನ ಪತ್ರವನ್ನು ಕೊಡುವುದರ ಮುಖಾಂತರ. . .

(**ಗೊಂದಲ**)

ಉಪಾಧ್ಯಕ್ಷರು :- ಆಂಜನೇಯರವರು ದಯವಿಟ್ಟು ಕುಳಿತುಕೊಂಡರೆ ಅನುಕೂಲವಾಗುತ್ತದೆ. ಈ ರೀತಿ ಮಧ್ಯದಲ್ಲಿ ಎದ್ದುನಿಂತುಕೊಂಡು ಮಾತನಾಡುವುದು ಸರಿಯಲ್ಲ. ನೀವು ಹೇಳಿರತಕ್ಕಂಥ ಭಾವನೆಗಳಿಗೆ ಅವರಾಗಲೇ ಉತ್ತರ ಕೊಟ್ಟಿದ್ದಾರೆ. ಪದೇ ಪದೇ ಮಾತನಾಡುತ್ತಿದ್ದರೆ ಹೇಗೆ? ಅವರನ್ನು ಬಜೆಟ್ ಮೇಲೆ ಮಾತನಾಡಲಿಕ್ಕೆ ಕರೆದಿದ್ದೇನೆ. ಅವರು ಮಾತನಾಡುವುದಕ್ಕೆ ಬಿಡಿ.

(ಗೊಂದಲ)

ಶ್ರೀ ಹೆಚ್. ಆಂಜನೇಯ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳಿಂದ ಸರಿಯಾದ ಉತ್ತರ ಬರಲಿಲ್ಲ.

(ಗೊಂದಲ)

ಉಪಾಧ್ಯಕ್ಷರು :- ಜಯಪ್ರಕಾಶ್ ಹೆಗ್ಡೆಯವರೆ ತಾವು ಮಾತನಾಡಿ. ಆಂಜನೇಯವರವರೆ, ದಯವಿಟ್ಟು ಕುಳಿತುಕೊಳ್ಳಿ. ಅದಕ್ಕೆ ಉತ್ತರವನ್ನು ನಾಳೆ ಕೊಡುತ್ತಾರೆ. ಸರ್ಕಾರ ಉತ್ತರ ಕೊಡುವಾಗ ಅದನ್ನು ಸೇರಿಸಿ ಉತ್ತರ ಕೊಡುತ್ತಾರೆ. ತಾವೆಲ್ಲ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಶಾಸಕರ ಭಾವನೆಗಳನ್ನು ಅವರು ಅರ್ಥಮಾಡಿಕೊಂಡಿದ್ದಾರೆ, ಅದರೊಟ್ಟಿಗೆ ಮಾನ್ಯ ಜಯಕುಮಾರ್‌ರವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಆಶ್ರಯ ಮನೆಗಳಿಗೆ ಬಹಳ ವರ್ಷಗಳಿಂದ ಹಣ ವಾಪಸ್ಸು ಕಟ್ಟಿಲ್ಲ. ಅವರು ಕಟ್ಟಬೇಕಾದ ಬಡ್ಡಿ ತುಂಬಾ ಜಾಸ್ತಿಯಾಗಿದೆ. ಆ ಬಡ್ಡಿ ಮನ್ನಾ ಮಾಡಿಕೊಳ್ಳುವ ಕಾರ್ಯಕ್ರಮವನ್ನಾದರೂ ಮಾಡಿಕೊಳ್ಳಬೇಕು. ಅದರೊಟ್ಟಿಗೆ ಬಡ್ಡಿ ಕಡಿಮೆ ಮಾಡುವ ವ್ಯವಸ್ಥೆ ಆಗಬೇಕು. ನೀವು RTC insist ಮಾಡುವುದನ್ನು ನಿಲ್ಲಿಸಬೇಕು. ಇದಿಷ್ಟು ಆಗಲೇಬೇಕಾಗುತ್ತದೆ. ನೀವು ಸಾಲ ಮನ್ನಾ ಮಾಡುವುದಕ್ಕೆ ಹೇಗೆ ಬೆಂಗಳೂರಿನ ಸುತ್ತಮುತ್ತ ಇದ್ದ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಮಾರಾಟ ಮಾಡಿ ಹಣವನ್ನು ಅಡ್ಜಸ್ಟ್ ಮಾಡುತ್ತೇವೆಂದು ಹೇಳುತ್ತೀರೋ ಅದರ

ಜೊತೆಗೆ ಇನ್ನೊಂದು ಕಾರ್ಯಕ್ರಮವನ್ನು ಮಾಡಿಕೊಳ್ಳಿ. ಈ bogus housing societies ಇವೆಯಲ್ಲ, ಅವುಗಳ ಮೇಲೆ ಕ್ರಮ ತೆಗೆದುಕೊಂಡು ನಿಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಿ. ಅವುಗಳ ಮೇಲೆ ಕ್ರಮ ತೆಗೆದುಕೊಂಡು ಆ ಜಾಗವನ್ನು ಮಾರಾಟ ಮಾಡಿ, ಯಾರ್ಯಾರು ಹಣ ಕಟ್ಟಿದ್ದಾರೆ ಅವರಿಗೆ ನಿವೇಶನವನ್ನು ಕೊಡಿಸುವ ವ್ಯವಸ್ಥೆ ಮಾಡಿಸಿ. ನಂತರ ಉಳಿದ ಜಾಗವನ್ನು ಮಾರಾಟ ಮಾಡಿ. ಇದರಿಂದ ಹಣ ಅಡ್ಜಸ್ಟ್ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಏಕೆಂದರೆ, ಬೆಂಗಳೂರಿನ ಸುತ್ತಮುತ್ತ ಕೇವಲ land grabbing ಮಾತ್ರವಲ್ಲ, ಹೌಸಿಂಗ್ ಸೊಸೈಟಿಯವರದು ಸಹ ಇದೇ ದಂಧೆಯಾಗಿದೆ. KPTCL ನ Employee ಒಬ್ಬರು ಅವರ officers ರವರಿಂದಲೇ ಹಣ ಲೂಟಿ ಮಾಡಿರುವುದನ್ನು ಟಿ.ವಿ.9 ದೂರದರ್ಶನದಲ್ಲಿ ಪ್ರಸಾರ ಮಾಡಿದ್ದಕ್ಕೆ ಟಿವಿ 9 ಕಛೇರಿಗೆ ನುಗ್ಗಿ ಅಲ್ಲಿದ್ದ ವಸ್ತುಗಳನ್ನು ಪುಡಿಮಾಡಿದ್ದಾರೆ. ಸರ್ಕಾರದ ಕಡೆಯಿಂದ ನೀವು ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಿ. ಎಲ್ಲಾ ಕಡೆಯಲ್ಲೂ ಇದೇ ಸಮಸ್ಯೆ ಉದ್ಭವವಾಗಿದೆ. ಇವೆಲ್ಲಾ ನಮ್ಮ ಶಾಸಕಾಂಗವನ್ನು ಸಹ ಬಿಟ್ಟಿಲ್ಲ. ಎಲ್ಲಾ ಕಡೆಯಲ್ಲೂ ಇದೇ ಅವ್ಯವಸ್ಥೆಯಾಗಿದೆ. ಅದಕ್ಕೋಸ್ಕರ ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಾ, ಮೊನ್ನೆ ಬೆಳಿಗ್ಗೆ ಮಾಧುಸ್ವಾಮಿಯವರು ಮಾತನಾಡುವಾಗ ಕೇಂದ್ರದ ಸಚಿವರಾದ ಶ್ರೀ ಚಿದಂಬರರವರು 40 ಸಾವಿರ ಕೋಟಿ ಇನ್ವೆಸ್ಟ್ ಮಾಡಿದ ಬಗ್ಗೆ ಹೇಳಿದರು. ಇಲ್ಲಿಯೂ ಹಿಂದೆ ಮಾಡಿದ್ದಾರೆ. KSSIDC ಮುಖಾಂತರ ಅನೇಕ industrialist invest ಮಾಡಿದ್ದಾರೆ. ಆದರೆ, ಅದು ಲಾಭದಾಯಕವಾಗಲಿಲ್ಲ. ಆದರೆ, ಅವರ ನಸೀಬು ಏನೆಂದರೆ, ಈ share market ಜಾಸ್ತಿ ಆಗಿದ್ದರಿಂದ ಲಾಭ ಆಗಿಹೋಯಿತು. ಒಂದು ಸಲ ಕುಸಿತ ಕಂಡದ್ದು ಶೇರ್ ಮಾರ್ಕೆಟ್ ಜಾಸ್ತಿ ಆಗಿದ್ದರಿಂದ ಅವರಿಗೆ KSSIDC ಮುಖಾಂತರ ಸ್ವಲ್ಪ ಲಾಭವಾಗಿದೆ. ಅದರ ಬಗ್ಗೆ ಸಹ ನೀವು ಆಲೋಚನೆ ಮಾಡಬಹುದೆಂದು ಹೇಳುತ್ತಾ, ಆಮೇಲೆ ತಾವು ಇನ್ನೊಂದು ಕಾರ್ಯಕ್ರಮವನ್ನು ಹೇಳಿದಿರಿ. KSFC ಯದು ಬಡ್ಡಿ ಮನ್ನಾ ಅಂದರೆ 10 ಲಕ್ಷ ಸಾಲ ತೆಗೆದುಕೊಂಡವರಿಗಿಂಥ ಕೆಳಗಿನವರಿಗೆ ಬಡ್ಡಿ ಮನ್ನಾ ಮಾಡುತ್ತೇವೆಂದು. One-time settlement ಗೆ ಸಂಬಂಧಪಟ್ಟಂತೆ KSFC ಯಲ್ಲಿನ ಬಡ್ಡಿ ಮನ್ನಾ ಕಾರ್ಯಕ್ರಮ ಈಗಲೂ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಕಳೆದ ಒಂದು ವರ್ಷದಿಂದ ಈ ಬಗ್ಗೆ ವ್ಯಾಪಕವಾದ ಚರ್ಚೆಯಾಗಿದೆ. 10 ಲಕ್ಷದ ವರೆಗಿನ ಸಾಲಕ್ಕೆ ನಾವೇನು concession ಕೊಡುವುದಕ್ಕೆ ಹೊರಟಿದ್ದೇವೆ, ನೀವು concession ಕೊಟ್ಟರೆ ನಾವು ಬದುಕಿಕೊಳ್ಳುತ್ತೇವೆ, ಉಳಿದುಕೊಳ್ಳುತ್ತೇವೆಂದು ಕಳೆದ ಒಂದು ವರ್ಷದಿಂದ ಓಡಾಡುತ್ತಿದ್ದಾರೆ. ಸುಮಾರು 130–140 ಕೋಟಿಗಳಷ್ಟು ನಮ್ಮ ಮೈಮೇಲೆ ಬರುತ್ತದೆ. ನಾವು concession ಕೊಟ್ಟಿರುವುದು ಅಷ್ಟೇ.

ಇಷ್ಟಾದರೂ ಸಹ ಹಂತ ಹಂತವಾಗಿ ಆ concession ಕೊಡಬೇಕೆಂದು ಒಂದು decision ತೆಗೆದುಕೊಂಡು ಈ ಆಯವ್ಯಯದಲ್ಲಿ ತರುವಂಥ ಪ್ರಯತ್ನ ಮಾಡಿದ್ದೇವೆ. ಯಾರು ಸಾಲ ತೆಗೆದುಕೊಂಡಿದ್ದಾರೆ ಅವರು ಇಷ್ಟಾದರೂ ಆಯಿತಲ್ಲಾ ಎಂದು ನೆಮ್ಮದಿಯಿಂದ ಇದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– Entire interest ಕಡಿಮೆ ಮಾಡಿದ್ದೀರಾ?

ಶ್ರೀ ಬಿ.ಎಸ್.ಯಡಿಯೂರಪ್ಪ :– ಹೌದು Upto 10 lacs.

ಶ್ರೀ ಜಯಪ್ರಕಾಶ್ ಹೆಗ್ಡೆ :– Upto 10 lacs intire interest. O.K. that is fine. ಒಳ್ಳೆಯ ಕೆಲಸ. ಅದಕ್ಕೆ ಸಣ್ಣ ಸಣ್ಣ ಉದ್ಯಮಗಳು ಅಂದರೆ poultry, piggery, brick industry ಎಲ್ಲ ಬರಬೇಕಾಗುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ :– ಅದರ ಜೊತೆಗೆ ಕೆ.ಎಸ್.ಎಫ್.ಸಿ ಯಲ್ಲಿ 50–60 ಕೋಟಿ ನೀವು ಸಬ್ಸಿಡಿ ಕೊಡುತ್ತಿದ್ದೀರಿ. ಕೋಳಿ, ಇಟ್ಟಿಗೆ, ಹೆಂಚು ಉದ್ಯಮ ಇವು ಬಹಳ ಮೇಜರ್ ಆಗಿ ರೈತ ವರ್ಗದವರು ಗ್ರಾಮೀಣ ಪ್ರದೇಶದಲ್ಲಿ ಮಾಡುವಂಥ ವ್ಯವಹಾರವಾಗಿದೆ. ನಾಳೆ ತಾವು reply ಕೊಡುವಾಗ ದಯವಿಟ್ಟು ಇದಕ್ಕೆ ಸಹಾಯ ಮಾಡಬೇಕೆಂದು ನಾನು ತಮ್ಮನ್ನು ಕೋರುತ್ತೇನೆ. ಇದಕ್ಕೆ ಬಹಳ ದುಡ್ಡು ಆಗುವುದಿಲ್ಲ. ಬೇರೆಯವರ ಹಾಗೆ ಹೆಚ್ಚುಹೆಚ್ಚಿಗೆ ತೆಗೆದುಕೊಂಡಿಲ್ಲ. ಬಹಳ ಕಡಿಮೆ ಇದೆ. ಇದೆಲ್ಲಾ ಬಡವರು ಗ್ರಾಮೀಣ ಪ್ರದೇಶದ ಜನರು ತೆಗೆದುಕೊಂಡಿರುವುದು. ಇದಕ್ಕೆ ಸ್ವಲ್ಪ ಆದ್ಯತೆ ಕೊಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಉಪ ಮುಖ್ಯಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜಯಪ್ರಕಾಶ್ ಹೆಗ್ಡೆ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹೊರಟ್ಟಿಯವರು ಇಲ್ಲೇ ಇದ್ದಾರೆ. Grant-in-aid ಗೆ ಸೇರಿಸುವಂತಾದ್ದು ಒಂದು ಕಾರ್ಯಕ್ರಮ ಇದೆ. ಇದರ ಜೊತೆಗೆ English medium ನಲ್ಲಿ ಶಾಲೆಯನ್ನು ನಡೆಸುವುದರ ಬಗ್ಗೆ ಬಹಳ ವರ್ಷದಿಂದ ಚರ್ಚೆ ಯಾಗುತ್ತಿದೆ. ಈ ವರ್ಷ ಒಂದನೇ ತರಗತಿಯಿಂದ ಪ್ರಾರಂಭ ಮಾಡುತ್ತಿದ್ದೀರಿ, ಅದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ ಕನ್ನಡ ಮಾಧ್ಯಮಕ್ಕೆ ಪರ್ಮಿಶನ್ ತೆಗೆದುಕೊಂಡು ಇಂಗ್ಲೀಷ್ ಮಾಧ್ಯಮವನ್ನು ಪ್ರಾರಂಭ ಮಾಡಿದವರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ, ಈ ಬಾರಿ ಬಿಡುವುದಿಲ್ಲವೆಂದು ಹೇಳುತ್ತೀರಿ. ಬೆಳಿಗ್ಗೆಯಿಂದ ಇಲ್ಲಿ ಚರ್ಚೆ ಏನಾಗುತ್ತಿದೆ, ನಾವು ಮತ್ತು ಮಾನ್ಯ ಶ್ರೀರಾಮರೆಡ್ಡಿಯವರು ಚರ್ಚೆ ಏನು ಮಾಡಿದ್ದೇವೆ ಎಂದರೆ, ಈ Multy National Companies ಏನು ಬಂದಿವೆ, ಅವರು ನಮ್ಮ ಮಕ್ಕಳಿಗೆ ಉದ್ಯೋಗವನ್ನು ಕೊಡುತ್ತಿಲ್ಲ. ಉದ್ಯೋಗವನ್ನು ಇವರಿಗೆ ಇಂಗ್ಲೀಷ್ ನಲ್ಲಿ ಮಾತನಾಡುವುದಕ್ಕೆ ಬರುವುದಿಲ್ಲವೆನ್ನುವ ಒಂದೇ ಉದ್ದೇಶದಿಂದ ಇವರಿಗೆ ಕೆಲಸ ಕೊಡುತ್ತಿಲ್ಲ. ಅವರು ಮಾರ್ಕ್ಸ್ ಎಲ್ಲರಿಗಿಂತ ಜಾಸ್ತಿ ತೆಗೆಯುತ್ತಿದ್ದಾರೆ. ಕನ್ನಡ ಮಾಧ್ಯಮ, ನಡೆಸುತ್ತೇವೆ ಎಂದು ಪರ್ಮಿಶನ್ ತೆಗೆದುಕೊಂಡು ಇಂಗ್ಲೀಷ್ ಮಾಧ್ಯಮವನ್ನು ಪ್ರಾರಂಭ ಮಾಡಿ ಇಷ್ಟು ವರ್ಷದವರೆಗೆ ನಡೆಸಿಕೊಂಡು ಬಂದಿದ್ದಾರೆ. ಆ ಭಾಗದ ಎಲ್ಲಾ ಮಕ್ಕಳಿಗೂ ಅದು ಸಹಾಯವಾಗಿದೆ. May be, you levy heavy penalty on them. ಅವುಗಳನ್ನು ಬಂದ್ ಮಾಡಿಸಬೇಡಿ. ಏಕೆಂದರೆ ಮಕ್ಕಳಿಗೆ ತುಂಬಾ ತೊಂದರೆಯಾಗುತ್ತದೆ. ನೋಡಿ, ಇದು ಎಲ್ಲಾ ರಕ್ಷಕರ ಒಂದು ಕೂಗು.

ಶ್ರೀ ಬಿ.ಎಸ್. ಹೊರಟ್ಟಿ :- ಮಾನ್ಯ ಉಪಾಧ್ಯಕ್ಷರೆ, ಇವತ್ತು ಕನ್ನಡದ ಮಾಧ್ಯಮದಲ್ಲಿ ಅನುಮತಿಯನ್ನು ಪಡೆದು ಸರ್ಕಾರದ ಪರವಾನಿಗೆ ಇಲ್ಲದೆ ಆಂಗ್ಲ ಮಾಧ್ಯಮದಲ್ಲಿ ಶಾಲೆಗಳನ್ನು ಕಾನೂನು ಬಿಟ್ಟು ನಡೆಸುತ್ತಿರುವವರ ಮೇಲೆ ಕ್ರಮ ತೆಗೆದುಕೊಂಡರೆ, ಅದು ತಪ್ಪು ಎಂದು ಹೇಳಿದರೆ ಸರ್ಕಾರ ಏನು ಮಾಡಬೇಕು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ತಪ್ಪು, ಹೌದು, ತಪ್ಪು ಎಂದು ನಾನು ಒಪ್ಪುತ್ತೇನೆ

ಶ್ರೀ ಬಿ.ಎಸ್. ಹೊರಟ್ಟಿ :– ಹೌದು, ತಪ್ಪು ಮಾಡಿದ್ದಾರೆ, ಅವರು ಕನ್ನಡ ಮಾಧ್ಯಮಕ್ಕೆ ಅನುಮತಿಯನ್ನು ತೆಗೆದುಕೊಂಡು ಆಂಗ್ಲ ಮಾಧ್ಯಮದಲ್ಲಿ ಶಾಲೆಗಳನ್ನು ನಡೆಸುತ್ತಿರುವುದರಿಂದ 2,025 ಶಾಲೆಗಳನ್ನು ಕಾನೂನು ಉಲ್ಲಂಘನೆ ಮಾಡಿವೆಯೆಂದು de-recognize ಮಾಡಿದ್ದೇವೆ. ಆ ಶಾಲೆಗಳ ಮಾನ್ಯತೆಯನ್ನು ರದ್ದು ಮಾಡಿದ್ದೇವೆ. ಇದರಲ್ಲಿ ಸರ್ಕಾರದ ತಪ್ಪು ಏನಿದೆ ಹೇಳಿ ನೋಡೋಣ.

ಶ್ರೀ ಜಯಪ್ರಕಾಶ್ ಹೆಗ್ಡೆ :– ಹಾಗಾದರೆ ಎಲ್ಲಾ ಸರ್ಕಾರದ ಆದೇಶ ತೆಗೆದುಕೊಂಡು ಕೊಟ್ಟಿದ್ದಾರ? ಮೊನ್ನೆ ಇಲ್ಲಿ ಕೇಳಲಿಲ್ಲವಾ? Multy Storied Building ಎಲ್ಲಾ ಸರ್ಕಾರದ ಪರ್ಮಿಶನ್ ತೆಗೆದುಕೊಂಡು ಕಟ್ಟಿದ್ದಾರ? At least ಇದರಿಂದ ಮಕ್ಕಳಿಗೆ ಸಹಾಯವಾಗಿದೆ. ಅದು ಕೆಲವರಿಗೆ ಹಣ ಮಾಡಲು ಸಹಾಯಕವಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ :– ಇದು ಸರಿಯಲ್ಲ, ನಿಜವಾಗಿ ಹೇಳುತ್ತೇನೆ. ಇಂಗ್ಲೀಷ್ ಕಲಿಸುವುದಕ್ಕೆ ಹೊರಟಿದ್ದಾರೆ. ಅವರು ಇಂಗ್ಲೀಷ್ ಕಲಿಸುವುದಕ್ಕೆ ಎಂದು ದುಡ್ಡು ತೆಗೆದುಕೊಂಡಿದ್ದಾರೆ.

ಶ್ರೀ ಬಿ.ಎಸ್. ಹೊರಟ್ಟಿ :– ಮಾನ್ಯ ಉಪಾಧ್ಯಕ್ಷರೆ, ಒಂದನೇ ತರಗತಿಯಿಂದ ಐದನೇ ತರಗತಿಯವರೆಗೆ ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕು ಎಂದು Supreme Court ruling ಇದೆ. Supreme Court decision ಪ್ರಕಾರ ಸರ್ಕಾರದವರು ಮಾಡಿದ್ದೇವೆ. ಮಕ್ಕಳು ಒಂದರಿಂದ ಐದನೇ ತರಗತಿಯವರೆಗೆ ಇಂಗ್ಲೀಷ್ ಕಲಿತರೆ ಅವರಿಗೆ ಮುಂದೆ ನೌಕರಿ ಸಿಗುತ್ತದಾ? 6 ರಿಂದ 7 ನೇ ತರಗತಿಗೆ ಇಂಗ್ಲೀಷ್ ಮಿಡಿಯಂಗೆ ಯಾವ ಶಾಲೆಗಳು ಸರಿ ಇವೆಯೆಂದು ನೋಡಿ ಪರ್ಮಿಶನ್ ಕೊಟ್ಟೇ ಕೊಡುತ್ತೇವೆ. ನಮ್ಮ ರಾಜ್ಯದಲ್ಲಿ 71 ಲಕ್ಷ ಮಕ್ಕಳು ಏನು ಓದುತ್ತಿದ್ದಾರೆ, ಅವರಲ್ಲಿ 53 ಲಕ್ಷ ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಓದುತ್ತಿದ್ದಾರೆ. ಆ 53 ಲಕ್ಷ ಮಕ್ಕಳು ಎಲ್ಲಿ ಇಂಗ್ಲೀಷ್ ಕಲಿಯುತ್ತಾರೆ? ಇಬ್ಬರೂ ಕೂಡ donation ಇಲ್ಲದೇ ಈ ಶಾಲೆಗಳನ್ನು ನಡೆಸಿಲ್ಲ. ಆ ಶಾಲೆಗಳ ಆಡಳಿತ ಮಂಡಳಿಯವರು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿದಾಗ, ಅವರು " ನಾವು

ತಪ್ಪು ಮಾಡಿದ್ದೇವೆ, Academic year ವರೆಗೂ ನಮಗೆ permission ಕೊಡಿ Academic year ಆದಮೇಲೆ ನಾವು ಕನ್ನಡದಲ್ಲಿ ನಡೆಸುತ್ತೇವೆ" ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :– ನಿಮ್ಮ ಕ್ರಮ ಸರಿಯಾಗಿದೆ. ನಿಮ್ಮ ಕ್ರಮಕ್ಕೆ ನಮ್ಮ ಸಂಪೂರ್ಣ ಬೆಂಬಲ ಇದೆ. ನೀವು ಯಾರ ಒತ್ತಡಕ್ಕೂ ಮಣಿಯಬೇಡಿ. ಅಂತಹದ್ದಕ್ಕೆ ಅವಕಾಶ ಕೊಡಲೇಬೇಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಹೌದು, ನಾನು ಮೊನ್ನೆ ಹೇಳಿದೆ. ನಮ್ಮ ಮಕ್ಕಳನ್ನೆಲ್ಲಾ ಇಂಗ್ಲೀಷ್ ಮಿಡಿಯಂ ಗೆ ಕಳುಹಿಸಿಕೊಡುವುದು. ಹಳ್ಳಿಗಳಲ್ಲಿ ಓದುವ ಮಕ್ಕಳನ್ನು ಕನ್ನಡ ಮಾಧ್ಯಮಕ್ಕೆ ಕಳುಹಿಸಿಕೊಡಬೇಕಾ? ಹಾಗಾದರೆ ನಿಮ್ಮ ಮಕ್ಕಳು ಯಾವ ಶಾಲೆಯಲ್ಲಿ ಕಲಿತರು?

ಶ್ರೀ ಬಿ.ಎಸ್. ಹೊರಟ್ಟಿ :– ಇಲ್ಲಿ ಕೇಳಿ, ನಮಗೆ ಇಂಗ್ಲೀಷ್ ಕಲಿಯುವುದಕ್ಕೆ ವಿರೋಧ ಇಲ್ಲ. 1994 ಕ್ಕಿಂತ ಮೊದಲು ಯಾವ ಶಾಲೆಗಳು ಇವೆ, ಅಲ್ಲಿ ದೊಡ್ಡವರ ಮಕ್ಕಳು ಇರಲಿ, ಯಾರೇ ಇರಲಿ, ಅಲ್ಲಿ ಇಂಗ್ಲೀಷ್ ಮಿಡಿಯಂನಲ್ಲಿ ಕಲಿತಿರುವವರ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಕಾನೂನು ಬಾಹಿರವಾದಂತಹ ಶಾಲೆಗಳನ್ನು ಬಂದ್ ಮಾಡಿದ್ದೇವೆ, ಮಕ್ಕಳಿಗೆ ಇಂಗ್ಲೀಷ್ ಕಲಿಸುತ್ತಿದ್ದಾರೆ ಎಂದು ಅಲ್ಲ. 1994 ರ ಮೊದಲು ಪ್ರಾರಂಭವಾದಂತಹ ಶಾಲೆಗಳಿಗೆಲ್ಲಾ ಸರ್ಕಾರದಿಂದ ಮಾನ್ಯತೆ ತೆಗೆದುಕೊಂಡಿದ್ದು ಸರ್ಕಾರ ಅನುಮತಿಯನ್ನು ನೀಡಿದೆ. ಆದರೆ 1994 ರ ನಂತರ ಸರ್ಕಾರ ಅನುಮತಿಯನ್ನು ಕೊಟ್ಟಿಲ್ಲ. ಅನುಮತಿಯನ್ನು ಕೊಡದೆ illegal ಆಗಿ ನಡೆಸುತ್ತಿದ್ದಾರೆ. ಇಂಗ್ಲೀಷ್ ಅನ್ನು ದೊಡ್ಡವರ ಮಕ್ಕಳು ಕಲಿಯುತ್ತಾರೆ ಎಂದರೆ ಅದಕ್ಕೆ ಯಾರದು ತಕರಾರು ಇಲ್ಲ. 1994 ರ ಮೊದಲು ಪ್ರಾರಂಭ ಮಾಡಿದಂತಹ ಶಾಲೆಗಳಲ್ಲಿ ಯಾರ ಮಕ್ಕಳು ಬೇಕಾದರೂ ಕಳುಹಿಸಲಿ, ಕನ್ನಡಕ್ಕೆ ಹೋರಾಟಗಾರರ ಮಕ್ಕಳನ್ನು ಕಳುಹಿಸಲಿ, ಅವರು ಇಂಗ್ಲೀಷ್ ಕಲಿಯಲಿ. ಆದರೆ 1994ರ ನಂತರ ಬಂದಂತಹ ಶಾಲೆಗಳು ಕಾನೂನು ಬಾಹಿರವಾಗಿ ಬಂದಂತಹ ಶಾಲೆಗಳು. ಆಡಳಿತ ಮಂಡಳಿಯವರು ಮಕ್ಕಳನ್ನು ಮುಂದೆ ಇಟ್ಟುಕೊಂಡು ಈ ರೀತಿ ಎಲ್ಲಾ ಮಾಡಿದರೆ, ನೀವು ಅವರಿಗೆ support ಮಾಡುತ್ತೇವೆಂದರೆ ಏನು ಹೇಳೋದು ಹೇಳಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ನಿಮ್ಮ ಜೊತೆ ನಾವು ಆಡಳಿತ ಮಂಡಳಿಯವರ ಮೇಲೆ ಹೋರಾಟಕ್ಕೆ ಇಳಿದಿದ್ದು.

ಶ್ರೀ ಬಿ.ಎಸ್. ಹೊರಟ್ಟಿ :– ಈ ವಿಷಯಕ್ಕೆ ಅಲ್ಲ.

ಉಪಾಧ್ಯಕ್ಷರು :– ಹೆಗ್ಡೆಯವರೆ ಮುಗಿಸಿಬಿಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ನಾನು ಆಡಳಿತ ಮಂಡಳಿಯವರ ಬಗ್ಗೆ ಬರಲಿಲ್ಲ. ಇನ್ನು ಕೆಲವು ವರ್ಷದಲ್ಲಿ ನೋಡಿ. ಇಂಗ್ಲೀಷ್ ಮೀಡಿಯಂ ಶಾಲೆಗಳು ಜಾಸ್ತಿ ಆದ ಹಾಗೆ ಕನ್ನಡ ಮೀಡಿಯಂ ಶಾಲೆಗಳಿಗೆ ನೀವು ಇದರಲ್ಲೂ ಪರ್ಮಿಶನ್ ಕೊಡದೇ ಹೋದರೆ ಅದು ಮುಚ್ಚಿ ಹೋಗುವಂತಹ ಪರಿಸ್ಥಿತಿ ಬರುತ್ತದೆ. ನೀವು ದೇಶದ ಬೇರೆ ಬೇರೆ ಭಾಗಗಳಲ್ಲಿ ಯಾವ್ಯಾವ ಭಾಷೆಯಲ್ಲಿ ಎಷ್ಟೆಷ್ಟು ಪರ್ಸೆಂಟ್ ಕಲಿಯುತ್ತಾರೆ ಎಂದು ನೋಡಿ. ಬೇರೆ ರಾಜ್ಯಗಳಿಗೆ ಹೋಲಿಸಿದಾಗ ಕರ್ನಾಟಕದಲ್ಲಿ ಕೇವಲ 7% ಕಲಿಯುತ್ತಿದ್ದಾರೆ. ಈ ರೀತಿ ಎಲ್ಲಾ ಇದೆ. ಅದಕ್ಕೋಸ್ಕರ, ಈ ರಕ್ಷಕರು ಏನು ಹೇಳುತ್ತಾರೆ? ಅದರ ಬಗ್ಗೆ ಗಮನ ಹರಿಸಬೇಕು. ಅದು ಬಿಟ್ಟು ಬೇರೆ ಏನನ್ನೂ ನಾನು ಕೇಳುತ್ತಿಲ್ಲ.

ಶ್ರೀ ಬಿ.ಎಸ್. ಹೊರಟ್ಟಿ :– ಮಾನ್ಯ ಉಪಾಧ್ಯಕ್ಷರೆ, ಅದಕ್ಕೆ ನಮ್ಮದು ವಿರೋಧ ಇಲ್ಲ. ಆದರೆ ತಪ್ಪುಗಳನ್ನು ಏನು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಈಗಾಗಲೇ ಸಚಿವ ಸಂಪುಟದ ಮುಂದೆ ಈ ವಿಷಯ ಇದೆ, ಇದು policy matter. ಸಚಿವ ಸಂಪುಟ ಏನು ತೀರ್ಮಾನ ಮಾಡುತ್ತದೋ ಅದನ್ನು ಫೈನಲ್ ಮಾಡುತ್ತೇವೆ. ರಾಜ್ಯದಲ್ಲಿ ಯಾವ ರೀತಿ ಪದ್ಧತಿಯನ್ನು ಇಡಬೇಕೆನ್ನುವುದು ಸರ್ಕಾರಕ್ಕೆ ಬಿಟ್ಟಿದ್ದು. ಸಚಿವ ಸಂಪುಟ ಏನು ತೀರ್ಮಾನ ಮಾಡುತ್ತದೆ, ಆ ತೀರ್ಮಾನಕ್ಕೆ ಬದ್ಧರಾಗಿರುತ್ತೇವೆ. ನನ್ನ ಕರ್ತವ್ಯವನ್ನು ನಾನು ಮಾಡಿದ್ದೇನೆ. ನಾನು ಶಿಕ್ಷಣ ಮಂತ್ರಿಯಾಗಿ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡಿದ್ದೇನೆ. ನಾಳೆ ಸಚಿವ ಸಂಪುಟ ಏನು ತೀರ್ಮಾನ ಮಾಡುತ್ತದೋ ಆ ತೀರ್ಮಾನಕ್ಕೆ ಬದ್ಧರಾಗಿರುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಸಚಿವ ಸಂಪುಟದ ಉಪಸಮಿತಿ ಏನಿದೆ, ಅಲ್ಲಿ ತೀರ್ಮಾನ ತೆಗೆದುಕೊಳ್ಳಿ. ಆಮೇಲೆ ಕ್ಯಾಬಿನೆಟ್‌ಗೆ ಬರುತ್ತದೆ. ಇದಕ್ಕೆ ಒಂದು ಸಬ್‌ಕಮೀಟಿ ಮಾಡಿದ್ದಾರೆ ಎಂದು ಕೇಳಿದೆ. ಅದರ ಮೇಲೆ cabinet ನಲ್ಲಿ decision ತೆಗೆದುಕೊಳ್ಳಿ. ಎಲ್ಲಾ ಮಂತ್ರಿಗಳು ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ಆ ಪ್ರಕಾರ ಮಾಡಿ. ಈಗ ಇಲ್ಲಿ ಹಣಕಾಸು ಸಚಿವರು ಇಲ್ಲ. ಮೊನ್ನೆ ಉಪಮುಖ್ಯಮಂತ್ರಿಗಳು ಉಡುಪಿಯಿಂದ night bus ನಲ್ಲಿ ಬಂದರು. ಅದರಿಂದ ಸಮಸ್ಯೆ ಏನಾಯಿತು ಎಂದರೆ ಬಂದವರೆ ಈ ಬಜೆಟ್ tax ಏರಿಸಿಬಿಟ್ಟರು. ಅವರು nihgt bus ನಲ್ಲಿ ಮಲಗಿಕೊಂಡು ಬಂದಿದ್ದು, ಈ ಬಾರಿ ಅವರು bus ಗಳಿಗೆಲ್ಲಾ ವಿಪರೀತ tax ಏರಿಸಿಬಿಟ್ಟರು. ಅದು tempo van ಗೆ 3,000 ಇದ್ದದ್ದು 4,700 ರೂಪಾಯಿ ಮಾಡಿದ್ದಾರೆ. ಈಗ per bus every quarter ಗೆ 82,500 ನಿಂದ 1,29,250 ಎಂದರೆ 47,000 ರೂಪಾಯಿ increase ಮಾಡಿದ್ದಾರೆ. ತಾವು ಉಡುಪಿಗೆ ಹಾಗೂ ಬ್ರಹ್ಮಾವರಕ್ಕೆ night bus ನಲ್ಲಿ ಬಂದಾಗ ತಮಗೆ ಜ್ಞಾನೋದಯವಾಯಿತು. Buses ಎಲ್ಲಾ ಎಳೆದು tax ಹಾಕಿಬಿಟ್ಟಿರಿ. ಇಷ್ಟೊಂದು tax ಜಾಸ್ತಿ ಮಾಡಿದರೆ ಯಾವಗಲೂ night bus ನಲ್ಲಿ ಓಡಾಡುವವರ ನಮ್ಮ ಪರಿಸ್ಥಿತಿ ಏನು? ಮಾರನೇ ದಿವಸ ಬೆಂಗಳೂರಿನಲ್ಲಿ, ZEE ಕನ್ನಡ ಟಿವಿ ಕಾರ್ಯಕ್ರಮ ಇತ್ತು ಎಂದು ಅದನ್ನು Attend ಮಾಡುವುದಕ್ಕೆ ನಿದ್ದೆ ಮಾಡಿಕೊಂಡು ಬರಬೇಕೆಂದು ಹೇಳಿ ಬಂದುಬಿಟ್ಟರು. ನೀವು ಇಷ್ಟು bus fare ಜಾಸ್ತಿ ಮಾಡಿದರೆ ಒಂದೇ ಸಾರಿ ನಾವು ದಿನನಿತ್ಯ night bus ನಲ್ಲಿ ಓಡಾಡುವವರ ಪರಿಸ್ಥಿತಿ ಚಿಂತಾಜನಕವಾಗುತ್ತದೆ. ದಯವಿಟ್ಟು ಇದರ ಬಗ್ಗೆ ಸ್ವಲ್ಪ ಪರಿಶೀಲನೆ ಮಾಡಿ. ನೀವು wine shop licence ಜಾಸ್ತಿ ಮಾಡಿ, illicit liquor ಗೆ ಜಾಸ್ತಿ ಅವಕಾಶವಾಗುತ್ತದೆ ಎಂದು ಒಂದು ಹೆದರಿಕೆ ನನಗೆ. Duty ಕಡಿಮೆ ಮಾಡಿ cheaper liquor market ಗೆ ಬರಬೇಕಾಗುತ್ತದೆ. ಇಲ್ಲದೇ ಇದ್ದರೆ ಇದು ಸಮಸ್ಯೆಯಾಗುತ್ತದೆ.

ಶ್ರೀ ರಘುಪತಿ ಭಟ್ :- ಮಾನ್ಯ ಉಪಾಧ್ಯಕ್ಷರೆ, ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ತೊಂದರೆಯಾಗುತ್ತದೆ. ಪ್ರೈವೇಟ್ ಬಸ್‌ಗಳು ಚಾರ್ಮುಡಿ ಘಾಟ್‌ನಲ್ಲಿ ಬರುವುದಕ್ಕೆ ಸಾಧ್ಯವಾಗದೇ ಸಂಪೂರ್ಣ loss ಆಗಿದ್ದಾರೆ.

ನೀವು ಇನ್ನೂ 60% extra tax ಹಾಕಿದರೆ ಆ ಬಸ್ ಉದ್ಯಮ ಬಂದ್ ಆಗುವಂತಹ chance ಇದೆ. ಇವತ್ತು KSRTC ಗೆ tax ಕಡಿಮೆ ಇದೆ. ಕೆ.ಎಸ್.ಆರ್.ಟಿ.ಸಿ ಯವರ ಬಸ್ ಅದೇ ದಾರಿಯಲ್ಲಿ ಬರುತ್ತವೆ. ಪ್ರೈವೇಟ್ ಬಸ್‌ನವರಿಗೆ ಮಾತ್ರ above 60% ಒಮ್ಮೆಗೆ ಹೆಚ್ಚಾಯಿತು ಎಂದರೆ, ಆ ಬಸ್ ಉದ್ಯಮ ಬಂದ್ ಆಯಿತು ಎಂದರೆ, ನಮ್ಮ ಎರಡು ಜಿಲ್ಲೆಗೆ ಮತ್ತು ರಾಜ್ಯಕ್ಕೂ ತೊಂದರೆ ಆಗುತ್ತದೆ. ಮಾನ್ಯ ಜಯಪ್ರಕಾಶ್ ಹೇಳಿರುವಂತಹ ಮಾತಿಗೆ ನಾನು ಉಪ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ, ಬಸ್ ಗೆ ಹಾಕಿರುವಂತಹ ಟ್ಯಾಕ್ಸ್ ಅನ್ನು ಕಡಿಮೆ ಮಾಡಿ ನಮ್ಮ ಉದ್ಯಮವನ್ನು ಉಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ :– KSRTC bus ಯಾವ ರೀತಿ tax ಹಾಕುತ್ತೀರಿ, ಕನಿಷ್ಠ ಅಷ್ಟು ಹಾಕಿದರೆ ಅದರಲ್ಲಿ ನ್ಯೆಜತೆ ಇದೆ, ಇಲ್ಲದೇ ಇದ್ದರೆ ಬಹಳ ಕಷ್ಟವಾಗುತ್ತದೆ. ಅದರಲ್ಲೂ ವಿಶೇಷವಾಗಿ ಕರಾವಳಿ ಜಿಲ್ಲೆಯಲ್ಲಿ ಇರುವಂತಹ buses ಬಗ್ಗೆ ಹೇಳುವುದಾದರೆ ಅದಕ್ಕೆ concession ಕೊಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಜಯಪ್ರಕಾಶ್ ಹೆಗ್ಡೆ :– ನಾನು ಮಾನ್ಯ ಚೆಲುವರಾಯಸ್ವಾಮಿಯವರಿಗೆ KSRTC Sleeper Coach night bus ಹಾಕಿ ನಮಗೆ ಸ್ವಲ್ಪ ಸುಲಭವಾಗುತ್ತದೆ ಎಂದು ಕೇಳಿಕೊಂಡಿದ್ದೇನೆ. ಇನ್ನು ಮಾನ್ಯ Revenue Minister ಸಿಗುತ್ತಿಲ್ಲ. ನಮ್ಮ ದೊಡ್ಡ ಸಮಸ್ಯೆಗಳು Revenue Department ದು. Forest Department ನವರಿಗೂ Revenue Department ನವರಿಗೂ ಒಂದು ಸಂಬಂಧ ಇದೆ. Revenue Department permission ನವರು ಕೊಡದೇ ownership certificate ಕೊಡದೇ ಜನರು ಮರಗಳನ್ನು ಕಡಿಯುವುದಕ್ಕೆ ಆಗುವುದಿಲ್ಲ. ನಮ್ಮ DC ಯವರು ownership certificate ಕೊಡುವುದಿಲ್ಲವೆಂದು ಆದೇಶ ಮಾಡಿದ್ದಾರೆ. ಬಡವರು ಏನಾದರೂ ಮನೆ ಕಟ್ಟುವುದಕ್ಕೆ ಅಥವಾ ಮಕ್ಕಳ ಮದುವೆ ಏನಾದರೂ ಮಾಡಬೇಕಾದಾಗ ಮಾರಬೇಕಾಗಿದ್ದರೆ ಅಲ್ಲಿ ಪರಿಸ್ಥಿತಿ ಚಿಂತಾಜನಕವಾಗಿದೆ. ಇದರ ಬಗ್ಗೆ ಜಿಲ್ಲಾಧಿಕಾರಿಗಳಿಗೂ ಹೇಳಬೇಕು ಎಂದು ಮಾನ್ಯ ಮಂತ್ರಿಗಳು ಯಾರು ಇದ್ದಾರೆ ಅವರು ಬರೆದುಕೊಂಡು ಹೇಳಬೇಕು.

ನಮ್ಮ ಹಣಕಾಸು ಆಯೋಗದ ಅಧ್ಯಕ್ಷರು ಹೇಳಿರುವ ಮಾತನ್ನು ಹೇಳಿದೆ. ನೀವು ಇಲ್ಲಿ ಇರಲಿಲ್ಲ ನಾನು ಪುನಃ ಅದನ್ನು ಓದುತ್ತೇನೆ. ಸರಕಾರಿ ಕಾಮಗಾರಿಗಳ ಬಗ್ಗೆ ಗ್ರಾಹಕರು ಅಧಿಕಾರಿಗಳು ಗಮನ ಹರಿಸಬೇಕೆಂದು ಹೇಳಿದರು, ವರಾಹಿ ಯೋಜನೆ ಈ ಶತಮಾನದಲ್ಲಾಗದೇ ಲೂಟಿ ಮಾತ್ರ ನಡೆಯುತ್ತಿದೆ ಎಂದು ಹೇಳಿದ್ದಾರೆ. ಅದನ್ನು ನೀವು ನೋಡಿಕೊಳ್ಳಬೇಕು. ಏಕೆಂದರೆ ನೀವು ಸಚಿವರು ನಿಮ್ಮ ಹಣಕಾಸು ಆಯೋಗದ ಅಧ್ಯಕ್ಷರು ಹೇಳಿದ್ದು. ಅದರ ಬಗ್ಗೆ ನಾನು ಅಷ್ಟನ್ನೇ ಹೇಳಿ ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಕೆ.ರಘುಪತಿ ಭಟ್ :- ಹಿಂದಿನ ಕಾಲದಲ್ಲಿ ಆಗಿದೆ ಎಂದು ಹೇಳಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಇಲ್ಲ ಅವರು ಪ್ರೆಜೆಂಟ್‌ಟೆನ್ಸ್ ಹೇಳಿದ್ದು. ಅವರು ಪಾಸ್ಟ್‌ಟೆನ್ಸ್ ಹೇಳಿಲ್ಲ. ನೀವು ಸೆಂಟೆನ್ಸ್ ಯಾವ ರೀತಿ ಬಂದಿದೆ ಎಂದು ನೋಡಬೇಕು. ಕೊನೆಯದಾಗಿ ಇವರದ್ದು ಈ ಸಾರಿ Revenue, tax ನಲ್ಲಿ increase ಎಷ್ಟು ಆಗಿದೆ, Revenue and expenditure Tax ದ್ದು Rs. 26,691 crore plus Rs. 2,804 crore ಅಲ್ಲವೇ? central share ನಿಂದ ಬಂದಿರುವುದು 1291 ಕೋಟಿ ರೂ. ಗ್ರ್ಯಾಂಟ್ ಬಂದಿರುವುದು probably, Rs 1,112 crore. Central Government ನಿಂದ ಬಂದಿರುವುದು Total 2,439 crore. ಅಂದರೆ non-tax revenue ನಿಮ್ಮದು ನೆಗೆಟೀವ್‌ನಲ್ಲಿದೆ. ಹೋದವರ್ಷಕ್ಕೆ ಹೋಲಿಸಿ ನೋಡುವಾಗ 2439 ಕೋಟಿ ಮೈನಸ್ ಆಗಿದೆ ಎಂದು ಕಾಣುತ್ತದೆ. probably , arrack ನಿಂದ ಕಡಿಮೆಯಾಗಿದೆ ಎಂದು ಕಾಣುತ್ತದೆ. ಅದನ್ನು ಹೇಗೆ make up ಮಾಡುತ್ತೀರಿ? 700 ಕೋಟಿ ಲ್ಯಾಂಡ್ ಸೇಲ್‌ನಿಂದ ಏನು ಬರುತ್ತದೆಂದು anticipate ಮಾಡಿದಿರಿ, ಅದರ ಬಗ್ಗೆಯೂ ಕೂಡ ತಾವು explain ಮಾಡಬೇಕಾಗುತ್ತದೆ. ಆದರೆ Fiscal deficit for 2006-07 is Rs. 2831.5 crore. Revenue surplus 1.46 % ಇತ್ತು. ಈ ಸಲ 2007–08 ಗೆ 1628.66 ಅಂದರೆ 0.74% ಹೋದ ಸಲಕ್ಕಿಂತ ತುಂಬಾ ಕಡಿಮೆಯಾಯಿತು. 50% ಏನು ಕಡಿಮೆಯಾದ ಹಾಗೆ ಆಯಿತು. ಇದರಲ್ಲಿ ಸ್ವಲ್ಪ 0.10% ಜಾಸ್ತಿಯಾಗಿದೆ, ತಾವು ಇದರ ಬಗ್ಗೆ ವಿವರಣೆ ಕೊಡಬೇಕೆಂದು ಕೇಳುತ್ತಾ, ಯಾವುದಕ್ಕೆ ಹಣವನ್ನು

ಒದಗಿಸಿಲ್ಲ ಪ್ರಾವಿಜನ್ ಮಾಡಿಕೊಂಡಿಲ್ಲ ಅದಕ್ಕೆ ಏನು ಮಾಡುತ್ತೀರಿ ಎಂದು ವಿವರಣೆ ನೀಡಬೇಕೆಂದು ಕೇಳುತ್ತಾ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4. ವರದಿಯನ್ನೊಪ್ಪಿಸುವುದು

ವಿಷಯ : ಅಧೀನ ಶಾಸನಾ ರಚನಾ ಸಮಿತಿಯ 2006–2007ನೇ ಸಾಲಿನ 33ನೇ ವಿಶೇಷ ವರದಿ :

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :– ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ವಿಧಾನ ಮಂಡಲದ ಅಧೀನ ಶಾಸನ ರಚನಾ ಸಮತಿಯ ಅಧ್ಯಕ್ಷನಾದ ನಾನು 2006–2007ನೇ ಸಾಲಿಗೆ ಆರ್ಥಿಕ ಇಲಾಖೆಯಡಿಯಲ್ಲಿ ಬರುವ ವಾಣಿಜ್ಯ ತೆರಿಗೆ ಇಲಾಖೆಗೆ ಸಂಬಂಧಿಸಿದಂತೆ ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರದ ಓಎಫ್‌ಸಿ ಮೂಲಕ ಬ್ರಾಡ್ ಬ್ಯಾಂಡ್ ಸೇವೆ ನೀಡುವ ದೂರಸಂಪರ್ಕ ಸಂಸ್ಥೆಗಳು ಸರ್ಕಾರಕ್ಕೆ ತೆರಿಗೆ ವಂಚನೆ ಮಾಡುತ್ತಿರುವ ಬಗೆಗಿನ ವಿಶೇಷ ವರದಿ, ಮೂವತ್ಮೂರನೇ ವರದಿಯನ್ನು ಸಮಿತಿಯ ಪರವಾಗಿ ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು :– ವರದಿಯನ್ನೊಪ್ಪಿಸಲಾಯಿತು.

(5) ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ದೇವದಾಸಿಯರ ಅಭಿವೃದ್ಧಿಗಾಗಿ ಮನೆ ನಿರ್ಮಾಣ ಮತ್ತು ವಿಧವಾ ವೇತನ.

286 (1929) ಶ್ರೀ ರೋಷನ್ ಬೇಗ್ ಆರ್. (ಜಯಮಹಲ್) :– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ, ಬಿಜಾಪುರ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿನ ದೇವದಾಸಿಯರ ಅಭಿವೃದ್ಧಿಗಾಗಿ 15000 ಮನೆಗಳನ್ನು ನಿರ್ಮಿಸಿ ಅವರಿಗೆ ಒದಗಿಸಲಾಗುವುದೆಂದು ಮಾನ್ಯ ಮುಖ್ಯ ಮಂತ್ರಿಯವರು ಘೋಷಿಸಿರುವುದು ನಿಜವೇ;